ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2039 ಕ್ಕೆ ಉತ್ತರ ಒದಗಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2039 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
03/11/2020

Received
07/11/2020.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2039
ಸದಸ್ಯರ ಹೆಸರು	:	ಶ್ರೀ. ರಾಮಪ್ಪ.ಎಸ್ (ಹರಿಹರ)
ಉತ್ತರಿಸುವ ದಿನಾಂಕ	:	30.09.2020
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಹರಿಹರ ಮತ ಕ್ಷೇತ್ರದಲ್ಲಿ ಹೊಸದಾಗಿ ಪಶು ಚಿಕಿತ್ಸಾ ಕೇಂದ್ರಗಳು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;	ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಯಾವುದೇ ಹೊಸ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ.
ಆ)	ಇದಕ್ಕಾಗಿ ಕ್ರಿಯಾ ಯೋಜನೆ ಸಿದ್ಧ ಪಡಿಸಲಾಗಿದೆಯೇ;	ಉದ್ಭವಿಸುವುದಿಲ್ಲ.
ಇ)	ಇಲ್ಲವಾದಲ್ಲಿ ಕಾರಣಗಳೇನು;	ಅನ್ವಯಿಸುವುದಿಲ್ಲ.

ಸಂ: ಪಸಂಮೀ ಇ-163 ಪಸಸೇ 2020

(ಪ್ರಭು. ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ ಇ-164 ಪಸಸೇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 03.11.2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಪತಿ ಭಟ್ ಕೆ. (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2051 ಕ್ಕೆ ಉತ್ತರ ಒದಗಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಪತಿ ಭಟ್ ಕೆ. (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2051 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
03/11/2020

Received
04/11/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2051
ಸದಸ್ಯರ ಹೆಸರು	:	ಶ್ರೀ.ರಘುಪತಿ ಭಟ್.ಕೆ (ಉಡುಪಿ)
ಉತ್ತರಿಸುವ ದಿನಾಂಕ	:	30.09.2020
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಪಶು ಆಸ್ಪತ್ರೆಗಳ ಬೇಡಿಕೆಯಿದ್ದು, ಈ ಬಗ್ಗೆ ಸರ್ಕಾರದಿಂದ ಏನು ಕ್ರಮಕೈಗೊಳ್ಳಲಾಗಿದೆ;	ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಪಶು ಆಸ್ಪತ್ರೆಗಳನ್ನು ಸ್ಥಾಪಿಸುವಂತೆ ಕೋರಿ ಬೇಡಿಕೆ ಬಂದಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಹೊಸ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ.
ಆ)	ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಎಷ್ಟು ಪಶು ಆಸ್ಪತ್ರೆಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಸಂ: ಪಸಂಮೀ ಇ-164 ಪಸಸೇ 2020

(ಪ್ರಭು. ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ ಇ-162 ಪಸಸೇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 03.11.2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1114 ಕ್ಕೆ ಉತ್ತರ ಒದಗಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1114 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
03/11/2020

Received
04/11/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1114
ಸದಸ್ಯರ ಹೆಸರು	:	ಶ್ರೀ. ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ದಿನಾಂಕ	:	30.09.2020
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಎಂ ಕೊಳ್ಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ರೈತರುಗಳ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ದೂರದ ಊರುಗಳಿಗೆ ಹೋಗಿಬರಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಬಂದಲ್ಲಿ, ಪಶು ಆಸ್ಪತ್ರೆಯನ್ನು ಎಂ. ಕೊಳ್ಳೂರು ಗ್ರಾಮ ಪಂಚಾಯತಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;	ಪ್ರಸಕ್ತ ಸಾಲಿನಲ್ಲಿ ಹೊಸ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ.
ಇ)	ಪಶು ಆಸ್ಪತ್ರೆ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಉದ್ಭವಿಸುವುದಿಲ್ಲ

ಸಂ: ಪಸಂಮೀ ಇ-162 ಪಸಸೇ 2020

(ಪ್ರಭು. ಬಿ. ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ ಇ-166 ಪಸಸೇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 03.11.2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

Received
04/11/2020

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೇವಾನಂದ್ ಪುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2117 ಕ್ಕೆ ಉತ್ತರ ಒದಗಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೇವಾನಂದ್ ಪುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2117 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
03/11/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2117
ಸದಸ್ಯರ ಹೆಸರು	:	ಶ್ರೀ.ದೇವಾನಂದ್ ಪುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸುವ ದಿನಾಂಕ	:	30.09.2020
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ವಿಜಯಪುರ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ವಿಜಯಪುರ ಜಿಲ್ಲೆಯಲ್ಲಿ ಒಟ್ಟು 15 ಪಶು ಆಸ್ಪತ್ರೆಗಳಿವೆ. ತಾಲ್ಲೂಕುವಾರು ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ತಾಲೂಕಿನ ಹೆಸರು	ಪಾಲಿ ಕ್ಲಿನಿಕ್	ಪಶು ಆಸ್ಪತ್ರೆಗಳ ಸಂಖ್ಯೆ	ಒಟ್ಟು ಸಂಸ್ಥೆ
01	ವಿಜಯಪುರ	1	2	–
02	ಇಂಡಿ	–	3	–
03	ಸಿಂದಗಿ	–	3	–
04	ಮುದ್ದೇಬಿಹಾಳ	–	3	–
05	ಬಿ.ಬಾಗೇವಾಡಿ	–	4	–
	ಒಟ್ಟು	1	15	16

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಆ)	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ; ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಪಶುವೈದ್ಯರ ಸಂಖ್ಯೆ ಎಷ್ಟು (ವಿವರವಾದ ಮಾಹಿತಿ ನೀಡುವುದು)	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 07 ಪಶು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ 07 ಪಶು ಚಿಕಿತ್ಸಾಲಯಗಳ ಪೈಕಿ 06 ಪಶು ಚಿಕಿತ್ಸಾಲಯಗಳಲ್ಲಿ ಪಶು ವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, 01 ಪಶು ಚಿಕಿತ್ಸಾಲಯದಲ್ಲಿ ಪಶು ವೈದ್ಯಾಧಿಕಾರಿ ಹುದ್ದೆ ಖಾಲಿ ಇರುತ್ತದೆ.
ಇ)	ನಾಗಠಾಣ ಮತ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ರಾಸುಗಳ ನೊಂದಣಿಯಾಗಿರುವ ಹಾಗೂ ಆಗದಿರುವ ರಾಸುಗಳ ಸಂಖ್ಯೆ ಎಷ್ಟು;	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಇಲ್ಲಿಯ ವರೆಗೆ ಇನಾಫ್ ಯೋಜನೆಯಡಿ 19,800 ರಾಸುಗಳ ನೋಂದಣಿಯಾಗಿರುತ್ತವೆ. 36,200 ರಾಸುಗಳು ಇನ್ನು ನೋಂದಣಿ ಆಗಬೇಕಾಗಿದೆ

ಈ)	ಸದರಿ ಕ್ಷೇತ್ರಕ್ಕೆ ಅವಶ್ಯವಿರುವ ಪಶು ಚಿಕಿತ್ಸಾಲಯಗಳು ಎಷ್ಟು; ಅವುಗಳು ಯಾವುವು? (ಸಂಪೂರ್ಣ ವಿವರ ನೀಡುವುದು)	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 22 ಪಶು ವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ಕ್ರ. ಸಂ	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ
01	ಚಡಚಣ	ಐನಾಪೂರ	ಹೊನ್ನುಟಗಿ
02		ತಿಡಗುಂದಿ	ಜಂಬಗಿ
03		ನಾಗಠಾಣ	ಕಗ್ಗೋಡ
04		ಹಲಸಂಗಿ	ಶಿವಣಗಿ
05		ಧೂಳಖೇಡ	ಕನ್ನಾಳ
06		ಜಿಗಜೀವಣಗಿ	ಕನ್ನೂರ
07		ಬರಡೋಳ	ಕವಲಗಿ
08			ಹಿಟ್ನಳ್ಳಿ
09			ಮದಭಾವಿ
10			ನೀವರಗಿ
11			ರೇವತಗಾಂವ
12			ಇಂಚಗೇರಿ
13			ಲೋಣಿ ಬಿ.ಕೆ
14			ಉಮರಜ
ಒಟ್ಟು	1	07	14

ಸಂ: ಪಸಂಮೀ ಇ-166 ಪಸಸೇ 2020

(ಪ್ರಭು. ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 434 ಜಿಪಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-10-2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ವಿಧಾನಸಭೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.2010ಗೆ ಉತ್ತರ ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.2010ಗೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ

Gayathri 22/10/2020
(ಗಾಯತ್ರಿ)
ಶಾಖಾಧಿಕಾರಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು,
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

7ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2010
ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	30-09-2020
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ರಾಯಚೂರು ಜಿಲ್ಲೆಯ BRGF ಯೋಜನೆಯ ಅನುದಾನ ಬಳಕೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಲಾಗಿದೆ; (ಸಂಪೂರ್ಣ ವಿವರವನ್ನು ತಿಳಿಸುವುದು)	ಹೌದು. ರಾಯಚೂರು ಜಿಲ್ಲೆಯಲ್ಲಿ 2007-08ನೇ ಸಾಲಿನಿಂದ 2014-15ನೇ ಸಾಲಿನವರೆಗೆ ಬಿ.ಆರ್.ಜಿ.ಎಫ್ ಯೋಜನೆಯಡಿ ಬಳಕೆಯಾಗದೇ ಉಳಿದ ಅನುದಾನ ರೂ.29.00ಕೋಟಿಗಳಾಗಿರುತ್ತದೆ. ಲಭ್ಯವಿರುವ ಈ ಮೊತ್ತಕ್ಕೆ ಕ್ರಿಯಾಯೋಜನೆಯನ್ನು ಸೀಮಿತಗೊಳಿಸಿ, ವಿನಿಯೋಗಿಸಲು ಆದೇಶವನ್ನು ನೀಡಲಾಗಿರುತ್ತದೆ (ಆದೇಶದ ಪ್ರತಿ ಲಗತ್ತಿಸಿದೆ).
ಆ)	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ಬಳಕೆಯಾಗದೇ ಇರುವ ಬಿಜಿಆರ್ಎಫ್ ಅನುದಾನವನ್ನು ಮರು ಬಳಕೆ ಮಾಡಿಕೊಳ್ಳಲು ಸರ್ಕಾರ ಏನು ಕ್ರಮ ಕೈಗೊಂಡಿರುತ್ತದೆ?	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ಬಿ.ಆರ್.ಜಿ.ಎಫ್ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಿರುವುದಿಲ್ಲ.

ಸಂಖ್ಯೆ:ಗ್ರಾಅಪಂರಾ 434 ಜಿಪಸ 2020

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಗ್ರಾಅಪಂ/108/ಯೋಉಮಾ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28-10-2020
29

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 2031 ಕ್ಕೆ ಉತ್ತರಿಸುವ ಕುರಿತು.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/ 15ನೇವಿಸ/ 7ಅ/ ಪ್ರ.ಸಂ.2031/2020 ದಿ:17.09.2020

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 2031 ಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕೋರಲಾದ ಮಾಹಿತಿಯ ಉತ್ತರದ 5 ಪ್ರತಿಗಳನ್ನು ಸಲ್ಲಿಸಿದೆ ಹಾಗೂ ಮಾಹಿತಿಯನ್ನು ಇ-ಮೇಲ್ ಮೂಲಕ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು,
ಯೋಜನೆ ಉಸ್ತುವಾರಿ ಮತ್ತು ಮಾಹಿತಿ ವಿಭಾಗ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

D/PMI20/COM5/DD/LAQ2020-21/ LAQ 2031/ Covering letter 108

ಕರ್ನಾಟಕ ವಿಧಾನ ಸಭೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2031
ಉತ್ತರಿಸಬೇಕಾದ ದಿನಾಂಕ : 30-09-2020
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ	ಪ್ರಶ್ನೆ	ಇಲಾಖೆಯ ಮಾಹಿತಿ
ಅ	ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; ಈ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; ಈ ಪೈಕಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳು ಯಾವುವು ; (ವಿವರವಾದ ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಈ ಇಲಾಖೆಯ ಪ್ರಮುಖ ಯೋಜನೆಗಳಲ್ಲಿ, ಬಿಡುಗಡೆಯಾದ ಅನುದಾನ ಮತ್ತು ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧ-ಅ (ಎ) (ಬಿ (ಸಿ) ರಲ್ಲಿ ಲಗತ್ತಿಸಲಾಗಿದೆ.
ಆ	ಸದರಿ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡ ದುರಸ್ತಿಯಲ್ಲಿದ್ದು ಅವುಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನಗೊಳಿಸಲು ಸಾಧ್ಯವಿಲ್ಲವೇ ;	ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ / ದುರಸ್ತಿ ಕಾಮಗಾರಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೇಂದ್ರ ಸರ್ಕಾರವು ಅಧಿಸೂಚಿಸಿರುವ ಕಾಮಗಾರಿಗಳ ಪಟ್ಟಿಯಲ್ಲಿ ಅನುಮತಿಸಲ್ಪಟ್ಟ ಕಾಮಗಾರಿಯಾಗಿರುವುದಿಲ್ಲ.
ಇ	ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಶಾಲಾ ಕಟ್ಟಡಗಳನ್ನು ಅನುಷ್ಠಾನಗೊಳಿಸಲು ಇರುವ ಆಡಚಣೆಗಳೇನು ; ಉದ್ಯೋಗ ಖಾತ್ರಿ ಯೋಜನೆಯಡಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ; (ವಿವರವಾದ ಮಾಹಿತಿ ನೀಡುವುದು)	ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ಕಟ್ಟಡಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ. ಸದರಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾಗುವ ಅನುದಾನದಿಂದ ರಾಜ್ಯದ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ನಮ್ಮ ಹೊಲ ನಮ್ಮ ದಾರಿ, ಗೋಕಟ್ಟೆ ಅಭಿವೃದ್ಧಿ ಕಾಮಗಾರಿಗಳು, ರೈತರ ಕಣ / ಒಕ್ಕಣೆ ಕಣ, ರೈತರ ಭೂ - ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ, ಕುರಿ/ದನದ ದೊಡ್ಡಿ, ಆಟದ ಮೈದಾನ, ಕೆರೆಗಳ ಪುನಶ್ಚೇತನ, ರಸ್ತೆ ಕಾಮಗಾರಿಗಳು, ಮನೆಗೊಂದು ಶೌಚಾಲಯ, ನಮ್ಮ ಹಳ್ಳಿ ನಮ್ಮ ನೀರು, ತೋಟಗಾರಿಕೆ ಬೆಳೆಗಳು, ಗೋದಾಮುಗಳು, ಬಹುಕಮಾನು ತಡೆಗೋಡೆ, ಕೊಳವೆ ಬಾವಿಗಳ ಮರುಪೂರಣ ಘಟಕ, ರಾಜೀವ್ ಗಾಂಧಿ ಸೇವಾ ಕೇಂದ್ರ, ಅಂಗನವಾಡಿ ಕೇಂದ್ರಗಳು, ನೆರೆ ನಿಯಂತ್ರಣ ಮತ್ತು ತಡೆ, ನೀರು ಸಂರಕ್ಷಣೆ ಮತ್ತು ನೀರಿನ ಕೊಯ್ಲು, ಸಾಂಪ್ರದಾಯಿಕ ನೀರಿನ ಮೂಲಗಳ ಪುನಃಶ್ಚೇತನ, ಅರಣ್ಯೀಕರಣವೂ ಸೇರಿದಂತೆ ಬರಗಾಲ ತಡೆಗಟ್ಟುವ, ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ವೈಯಕ್ತಿಕ ಕಾಮಗಾರಿಗಳು ಹಾಗೂ ಈ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳಲ್ಲಿ ಅನುಮತಿಸಲ್ಪಟ್ಟಿರುವ ಇತರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಪ್ರ.ತಿ.ನೋ

ಈ	ಕಳೆದ ಮೂರು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಜಾರಿಗೊಳಿಸಲಾದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳೆಷ್ಟು; ಆ ಯೋಜನೆಗಳಿಗೆ ನಿಗದಿಪಡಿಸಲಾಗಿರುವ ಅನುದಾನವೆಷ್ಟು; ಇದರಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳು ಎಷ್ಟು; (ವಿವರವಾದ ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಯಾವುದೇ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಈ ಮತಕ್ಷೇತ್ರದಡಿ ಜಾರಿಗೊಳಿಸಿರುವುದಿಲ್ಲ.
ಉ	ಅಪೂರ್ಣಗೊಂಡ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ;	ಅನ್ವಯಿಸುವುದಿಲ್ಲ
ಊ	ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಗುತ್ತಿಗೆದಾರರಿಗೆ ಯಾವ ಕಾಲಮಿತಿಯೊಳಗೆ ನಿರ್ವಹಣೆ ಜವಾಬ್ದಾರಿ ನೀಡಲಾಗಿದೆ ?	ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ಯೋಜನೆಗೆ ಪೂರ್ಣಗೊಂಡ ನಂತರ 5 ವರ್ಷಗಳ ಕಾಲಾವಧಿಯವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

ಸಂಖ್ಯೆ: ಗ್ರಾಅಪ 108 ಯೋಉಮಾ 2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2031

ಅನುಬಂಧ-ಅ (ಎ)

2017-18ನೇ ಸಾಲಿನಲ್ಲಿ ಬಿಜಾಪುರ ನಾಗಠಾಣ ವಿಧಾಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಕಾರ್ಯಕ್ರಮಗಳಡಿ ಕೈಗೊಂಡ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ಬಿಡುಗಡೆ ಯಾದ ಅನುದಾನ	ಕೈಗೊಂಡ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ		
				ಕೈಗೊಂಡ ಕಾಮಗಾರಿಗಳು	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು
1	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	1301.38	ಮೂಲಭೂತ ಸೌಕರ್ಯ	3302	3103	199
2	ಸ್ವಚ್ಛ ಭಾರತ ಅಭಿಯಾನ	437.38	1) ಶೌಚಾಲಯ ಸ್ನಾನಗೃಹ	6940	6860	80
		136.36	2) ಘನ ಮತ್ತು ದ್ರವ ತ್ಯಾಜ್ಯ ವಸ್ತು ವಿಲೇವಾರಿ	8	8	0
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	1766.99	ಕುಡಿಯುವ ನೀರಿನ ಕಾಮಗಾರಿಗಳು	148	135	13
4	ಪಿ.ಎಂ.ಜಿ.ಎಸ್.ವೈ	4530	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	106	106	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್‌ಡಿಪಿ-ಎಸ್‌ಸಿಪಿ-ಟಿಎಸ್‌ಪಿ ಒಳಗೊಂಡಂತೆ)	436.10	ರಸ್ತೆ ಸುಧಾರಣೆ	5	3	2
6	ಆರ್.ಐ.ಡಿ.ಎಫ್ ನಬಾರ್ಡ್	43.51	ಗ್ರಾಮೀಣ ರಸ್ತೆಗಳ ಸುಧಾರಣೆ	1	1	0
7	ಸುವರ್ಣಗ್ರಾಮೋದಯ	3759.5	ಸಿಸಿ ರಸ್ತೆ/ಸಮುದಾಯ ಭವನಗಳು	69	48	4
	ಗ್ರಾಮವಿಕಾಸ	2299.95	ಸಿಸಿ ರಸ್ತೆ/ಸಮುದಾಯ ಭವನಗಳು	27	7	20
	ಮುಖ್ಯಮಂತ್ರಿ ಗ್ರಾಮ ವಿಕಾಸ	1600.82	ಸಿಸಿ ರಸ್ತೆ/ಸಮುದಾಯ ಭವನಗಳು/ಗರಡಿ ಮನೆ	36	0	34
8	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	23.00	ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	7	7	0
9	ಹಣಕಾಸು ಆಯೋಗದ ಅನುದಾನ	684.78	ಮೂಲಭೂತ ಸೌಕರ್ಯ	823	779	44
10	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	64.25	ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ (ಸಮುದಾಯ ಭವನ, ಶಾಲಾ ಕಟ್ಟಡ)	33	33	0
11	ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನ	25.89	ಮೂಲಭೂತ ಸೌಕರ್ಯ	42	42	0
12	3054 ನಿರ್ವಹಣೆ ಅನುದಾನ	140.3	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	68	68	0

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2031

ಅನುಬಂಧ-ಅ (ಬಿ)

2018-19ನೇ ಸಾಲಿನಲ್ಲಿ ಬಿಜಾಪುರ ನಾಗಠಾಣ ವಿಧಾಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಕಾರ್ಯಕ್ರಮಗಳಡಿ ಕೈಗೊಂಡ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ಬಿಡುಗಡೆ ಯಾದ ಅನುದಾನ	ಕೈಗೊಂಡ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ		
				ಕೈಗೊಂಡ ಕಾಮಗಾರಿಗಳು	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು
1	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	1557.38	ಮೂಲಭೂತ ಸೌಕರ್ಯ	4108	3061	1047
2	ಸ್ವಚ್ಛ ಭಾರತ ಅಭಿಯಾನ	1547	ಶೌಚಾಲಯ ನಿರ್ಮಾಣ	14700	14420	280
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	2764.21	ಕುಡಿಯುವ ನೀರಿನ ಕಾಮಗಾರಿಗಳು	264	244	20
4	ಸಿ.ಎಂ.ಜಿ.ಎಸ್.ವೈ	2306.41	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	116	58	42
5	ಪಿಎಮ್‌ಜಿಎಸ್‌ವೈ ರಸ್ತೆಗಳ ನಿರ್ವಹಣೆ	3.08	ರಸ್ತೆ ನಿರ್ವಹಣೆ	12	12	0
6	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್‌ಡಿಪಿ-ಎಸ್‌ಸಿಪಿ-ಟಿಎಸ್‌ಪಿ ಒಳಗೊಂಡಂತೆ)	469.78	ರಸ್ತೆ ಸುಧಾರಣೆ	7	5	2
7	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	41.00	ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	8	8	0
8	ಹಣಕಾಸು ಆಯೋಗದ ಅನುದಾನ	995.52	ಮೂಲಭೂತ ಸೌಕರ್ಯ	960	921	39
9	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	46.3	ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ (ಸಮುದಾಯ ಭವನ, ಶಾಲಾ ಕಟ್ಟಡ)	26	26	0
10	ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನ	22.8	ಮೂಲಭೂತ ಸೌಕರ್ಯ	27	27	0
11	3054 ನಿರ್ವಹಣೆ ಅನುದಾನ	100.53	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	46	46	0

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2031

ಅನುಬಂಧ-ಅ (ಸಿ)

2019-20ನೇ ಸಾಲಿನಲ್ಲಿ, ಬಿಜಾಪುರ ನಾಗಠಾಣ ವಿಧಾಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಕಾರ್ಯಕ್ರಮಗಳಡಿ ಕೈಗೊಂಡ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ಬಿಡುಗಡೆ ಯಾದ ಅನುದಾನ	ಕೈಗೊಂಡ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ		
				ಕೈಗೊಂಡ ಕಾಮಗಾರಿಗಳು	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು
1	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	2632.48	ಮೂಲಭೂತ ಸೌಕರ್ಯ	4608	3424	1184
2	ಸ್ವಚ್ಛ ಭಾರತ ಅಭಿಯಾನ	1210.65	ಶೌಚಾಲಯ ನಿರ್ಮಾಣ	2083	2053	30
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	960.9	ಕುಡಿಯುವ ನೀರಿನ ಕಾಮಗಾರಿಗಳು	139	117	22
4	ಸಿ.ಎಂ.ಜಿ.ಎಸ್.ವೈ	97.75	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	29	29	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್‌ಡಿಪಿ-ಎಸ್‌ಸಿಪಿ-ಟಿಎಸ್‌ಪಿ ಒಳಗೊಂಡಂತೆ)	138.07	ರಸ್ತೆ ಸುಧಾರಣೆ	4	2	2
6	ಆರ್.ಐ.ಡಿ.ಎಫ್ ನಬಾರ್ಡ್	17	ಗ್ರಾಮೀಣ ರಸ್ತೆಗಳ ಸುಧಾರಣೆ	1	1	0
7	ಸುವರ್ಣಗ್ರಾಮೋದಯ	1500	ಸಿಸಿ ರಸ್ತೆ/ಸಮುದಾಯ ಭವನಗಳು	21	11	10
8	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	49.00	ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	4	4	0
9	ಹಣಕಾಸು ಆಯೋಗದ ಅನುದಾನ	1467.99	ಮೂಲಭೂತ ಸೌಕರ್ಯ	1018	917	101
10	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	742.18	ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ (ಸಮುದಾಯ ಭವನ, ಶಾಲಾ ಕಟ್ಟಡ)	202	183	14
11	ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನ	64.6	0	52	37	15
12	3054 ನಿರ್ವಹಣೆ ಅನುದಾನ	131.22	ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ	70	70	0

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 53 ರೇರಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 22.10.2020.

ಇಂದ:

ಸರ್ಕಾರದ ಕಾರ್ಯದರ್ಶಿಯವರು,
ವಸತಿ ಇಲಾಖೆ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು-560001.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ ಚುಕ್ಕೆ ಗುರುತಿರುವ ಪ್ರಶ್ನೆ ಸಂಖ್ಯೆ: 1229 ಕ್ಕೆ ಉತ್ತರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ಕವಿಪ:ಎಲ್ ಸಿಜ್ಯೂ:1229:141ನೇಅ:2020, ದಿನಾಂಕ: 21.09.2020.

******

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1229 ಗೆ ಉತ್ತರದ 20 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಿ. ಶಿವಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ)
ವಸತಿ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:-

ಸರ್ಕಾರದ ಅಧೀನ ಕಾರ್ಯದರ್ಶಿ-2 ವಸತಿ ಇಲಾಖೆ, (ಸಮನ್ವಯ ಶಾಖೆ) ಬೆಂಗಳೂರು-560001.

22/10/20
PM - 5:00

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1229
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾಗಿದ್ದ ದಿನಾಂಕ	30.09.2020
ಉತ್ತರಿಸುವ ಸಚಿವರು	ವಸತಿ ಸಚಿವರು

ಅನು ಕ್ರಮ	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ಯಾವಾಗ ಸ್ಥಾಪನೆಯಾಯಿತು; ಇದರ ಅಧ್ಯಕ್ಷರು ಮತ್ತು ಸದಸ್ಯರು ಯಾರು; (ಹೆಸರು, ಅವಧಿ, ವಿವರ ನೀಡುವುದು)	ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ದಿನಾಂಕ: 14.07.2017 ರಂದು ಮಧ್ಯಂತರ ಪ್ರಾಧಿಕಾರವಾಗಿ, ತದನಂತರ ದಿನಾಂಕ: 07.03.2019 ರಂದು ಖಾಯಂ ಪ್ರಾಧಿಕಾರವಾಗಿ ಸ್ಥಾಪನೆಯಾಗಿರುತ್ತದೆ. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರು ಹಾಗೂ ಸದರಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವವರ ವಿವರ ಈ ಕೆಳಕಂಡಂತಿದೆ:-

ಪದನಾಮ	ಹೆಸರು	ಅವಧಿ
ಅಧ್ಯಕ್ಷರು	ಶ್ರೀ ಕಪಿಲ್ ಮೋಹನ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ (ಹಿಂದಿನ)	ದಿನಾಂಕ: 14.07.2017 ರಿಂದ 28.06.2018 ರವರೆಗೆ ಮಧ್ಯಂತರ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.
	ಶ್ರೀ ಟಿ.ಕೆ. ಅನಿಲ್ ಕುಮಾರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ (ಹಿಂದಿನ)	ದಿನಾಂಕ: 28.06.2018 ರಿಂದ 20.08.2018 ರವರೆಗೆ ಮಧ್ಯಂತರ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.
	ಡಾ: ರವಿಶಂಕರ್. ಜೆ., ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ (ಹಿಂದಿನ)	ದಿನಾಂಕ: 20.08.2018 ರಿಂದ 07.03.2019 ರವರೆಗೆ ಮಧ್ಯಂತರ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.
	ಶ್ರೀ ಎಂ.ಆರ್. ಕಾಂಬಳೆ, ಭಾ.ಆ.ಸೇ. (ನಿ.)	ಸರ್ಕಾರದ ಅಧಿಸೂಚನೆ ಸಂಖ್ಯೆ: ವಇ 24 ರೇರಾ 2017, ದಿನಾಂಕ: 05.03.2019 ರಲ್ಲಿ ಕರ್ನಾಟಕ ಮಧ್ಯಂತರ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರನ್ನು ನೇಮಕ ಮಾಡಿದ ನಂತರ ಮಧ್ಯಂತರ ಪ್ರಾಧಿಕಾರವು ಖಾಯಂ ಪ್ರಾಧಿಕಾರವಾಗಿ ಸ್ಥಾಪನೆಯಾಗಿರುತ್ತದೆ. ಇವರು ದಿನಾಂಕ: 07.03.2019 ರಂದು ಸದರಿ ಪ್ರಾಧಿಕಾರದ

		ಅಧ್ಯಕ್ಷರಾಗಿ ಕಾರ್ಯಭಾರ ವಹಿಸಿಕೊಂಡಿರುತ್ತಾರೆ. ಪ್ರಸ್ತುತ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವಾವಧಿಯು ದಿನಾಂಕ: 30.05.2021 ರಂದು ಮುಕ್ತಾಯಗೊಳ್ಳಲಿದೆ.
ಸದಸ್ಯರು-1	ಶ್ರೀ ವಿಷ್ಣುವರ್ಧನ ರೆಡ್ಡಿ, ಐ.ಆರ್.ಎಸ್. (ನಿ.)	ಇವರು ದಿನಾಂಕ: 05.03.2019 ರಂದು ಸದರಿ ಪ್ರಾಧಿಕಾರದ ಸದಸ್ಯರಾಗಿ ಕಾರ್ಯಭಾರ ವಹಿಸಿಕೊಂಡಿರುತ್ತಾರೆ. ಪ್ರಸ್ತುತ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವಾವಧಿಯು ದಿನಾಂಕ: 10.11.2022 ರಂದು ಮುಕ್ತಾಯಗೊಳ್ಳಲಿದೆ.
ಸದಸ್ಯರು-2	ಶ್ರೀ ಅದೋನಿ ಸೈಯದ್ ಸಲೀಂ, ಭಾ.ಆ.ಸೇ. (ನಿ.)	ಇವರು ದಿನಾಂಕ: 06.03.2019 ರಂದು ಸದರಿ ಪ್ರಾಧಿಕಾರದ ಸದಸ್ಯರಾಗಿ ಕಾರ್ಯಭಾರ ವಹಿಸಿಕೊಂಡಿರುತ್ತಾರೆ. ಪ್ರಸ್ತುತ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವಾವಧಿಯು ದಿನಾಂಕ 30.05.2021 ರಂದು ಮುಕ್ತಾಯಗೊಳ್ಳಲಿದೆ.

ಆ	ಈ ಪ್ರಾಧಿಕಾರ ಸ್ಥಾಪನೆಯ ಉದ್ದೇಶ ಹಾಗೂ ಕಾರ್ಯವ್ಯಾಪ್ತಿ ಏನು;	ಪ್ರಾಧಿಕಾರ ಸ್ಥಾಪನೆಯ ಉದ್ದೇಶ ಮತ್ತು ಕಾರ್ಯವ್ಯಾಪ್ತಿ ಈ ಕೆಳಕಂಡಂತಿದೆ:-

1.	ರಿಯಲ್ ಎಸ್ಟೇಟ್ ಯೋಜನೆಗಳನ್ನು ನೋಂದಾಯಿಸುವುದು ಮತ್ತು ರಿಯಲ್ ಎಸ್ಟೇಟ್ ಏಜೆಂಟರ ನೋಂದಣಿ ಮಾಡಿಸುವುದು.
2.	ಪ್ರವರ್ತಕರು (Promoters) ತಮ್ಮ ಯೋಜನೆಯ ವಿವರಗಳನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ಸಾರ್ವಜನಿಕರಿಗೆ ತಿಳಿಸುವುದು.
3.	ಪ್ರವರ್ತಕರಿಂದ ನೋಂದಾಯಿಸಲ್ಪಟ್ಟ ರಿಯಲ್ ಎಸ್ಟೇಟ್ ಯೋಜನೆಗಳು, ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳಿಂದ ಎಲ್ಲಾ ರೀತಿಯ ಅನುಮೋದನೆ / ಅನುಮತಿ ಪಡೆದಿರುವುದನ್ನು ಖಾತರಿಪಡಿಸುವುದು.
4.	ಸಾರ್ವಜನಿಕರು ಅಪಾರ್ಟ್‌ಮೆಂಟ್ / ನಿವೇಶನಗಳನ್ನು ಖರೀದಿಸುವಾಗ ರೇರಾ ಪ್ರಾಧಿಕಾರದಲ್ಲಿ ನೋಂದಣಿಯಾಗಿರುವ ಯೋಜನೆಗಳ ಬಗ್ಗೆ ರೇರಾ ವೆಬ್ ಪೋರ್ಟಲ್‌ನಲ್ಲಿ ಅಗತ್ಯವಾದ ಎಲ್ಲಾ ದಾಖಲೆಗಳು ಮತ್ತು ಮಾಹಿತಿಯು ಇರುವುದರಿಂದ, ಖರೀದಿದಾರರಿಗೆ ಮನೆ / ನಿವೇಶನ ಖರೀದಿ ಮಾಡಲು ಸ್ಪಷ್ಟ ದಾಖಲೆಗಳು ಮತ್ತು ಮಾಹಿತಿ ಲಭ್ಯವಾಗುತ್ತದೆ.

5.	ಪ್ರವರ್ತಕರು ಗ್ರಾಹಕರಿಂದ ಪಡೆದುಕೊಂಡ ಹಣದಲ್ಲಿ 70% (ಶೇಕಡಾ ಎಪ್ಪತ್ತು) ರಷ್ಟು ಹಣವನ್ನು ಕಡ್ಡಾಯವಾಗಿ ನಿರ್ದಿಷ್ಟ / ಪ್ರತ್ಯೇಕ ಖಾತೆ ತೆರೆದು ಇಡುವುದರಿಂದ, ಯೋಜನೆ ನಿರ್ಮಾಣಕ್ಕೆ ಸದರಿ ಹಣವನ್ನು ಉಪಯೋಗಿಸಿಕೊಳ್ಳುತ್ತಿರುವ ಬಗ್ಗೆ ರೇರಾ ಪ್ರಾಧಿಕಾರವು ನಿಗಾ ವಹಿಸುತ್ತಿರುತ್ತದೆ. ಪ್ರವರ್ತಕರು ತ್ರೈಮಾಸಿಕ ವರದಿಯಲ್ಲಿ ಈ ಮಾಹಿತಿಗಳನ್ನು ರೇರಾ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ನೀಡಬೇಕಾಗಿರುತ್ತದೆ.
6.	ನೋಂದಾಯಿತ ಏಜೆಂಟರುಗಳು ಮಾತ್ರ ಪ್ರವರ್ತಕರು ಹಾಗೂ ಖರೀದಿದಾರರ ನಡುವಿನ ಸಂಪರ್ಕ ಕೊಂಡಿಯಾಗಿ ಕರ್ತವ್ಯ ನಿರ್ವಹಿಸುವುದರಿಂದ, ವ್ಯವಹಾರ ಸುಗಮವಾಗುತ್ತದೆ.
7.	ರೇರಾ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಯೋಜನೆಗಳ ಕುರಿತು ಪ್ರವರ್ತಕರು ಮತ್ತು ಖರೀದಿದಾರರ ನಡುವೆ ವಿವಾದ ಉಂಟಾದರೆ ಅಂತಹ ಪ್ರವರ್ತಕರು ಮತ್ತು ಖರೀದಿದಾರರು ರೇರಾ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸಿ, ಪರಿಹಾರ ಪಡೆಯಬಹುದಾಗಿದೆ.
8.	ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಆದೇಶದಂತೆ ಹಾಗೂ ರೇರಾದ ಮಾನ್ಯ ನ್ಯಾಯನಿರ್ಣಯಾಧಿಕಾರಿಗಳ ಆದೇಶದಂತೆ ಪ್ರವರ್ತಕರಿಂದ ಎದುರುದಾರರಿಗೆ ಪಾವತಿಯಾಗಬೇಕಾಗಿರುವ ಮೊತ್ತವನ್ನು ಕಂದಾಯ ಬಾಕಿ ಎಂದು ಪರಿಗಣಿಸಿ, ಈ ಬಾಕಿಯನ್ನು ವಸೂಲು ಮಾಡಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗುತ್ತಿದೆ.
9.	ದಿ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 2016 ರ ಕಲಂ 3(1)ರ ಅನ್ವಯ ಎಲ್ಲಾ ರಿಯಲ್ ಎಸ್ಟೇಟ್ ಯೋಜನೆಗಳನ್ನು ರೇರಾ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ನೋಂದಾಯಿಸಿಕೊಳ್ಳದೆ ಯಾವುದೇ ಪ್ರವರ್ತಕರು ಯೋಜನೆಯನ್ನು ಅಭಿವೃದ್ಧಿಪಡಿಸುತ್ತಿದ್ದಲ್ಲಿ ಅಂತಹವರ ವಿರುದ್ಧ ರೇರಾ ಕಾಯ್ದೆ ಮತ್ತು ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುವುದು. ಇದರಿಂದಾಗಿ ಯಾರೂ ಸಹ ಅನಧಿಕೃತವಾಗಿ ರಿಯಲ್ ಎಸ್ಟೇಟ್ ಯೋಜನೆಗಳನ್ನು ಕೈಗೊಳ್ಳುವಂತಿಲ್ಲ.
10.	ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) 2016 ರ ಸೆಕ್ಷನ್ 32 (ಜಿ) ಪ್ರಕಾರ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ವಿವಾದ ಇತ್ಯರ್ಥ ಕೋಶದ ಮೂಲಕ ಪ್ರವರ್ತಕರು ಮತ್ತು ಹಂಚಿಕೆದಾರರ ನಡುವಿನ ವಿವಾದಗಳನ್ನು ಸೌಹಾರ್ದಯುತ ಹೊಂದಾಣಿಕೆಗೆ ಅನುಕೂಲವಾಗುವಂತೆ ಸಂಧಾನ ಮತ್ತು ವಿವಾದ ಪರಿಹಾರ ಕೋಶವನ್ನು (ಕೆ.ಸಿ.ಡಿ.ಆರ್.ಸಿ) ಸ್ಥಾಪಿಸಲಾಗಿದೆ.
11.	ರೇರಾ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಯೋಜನೆಗಳ ಕುರಿತು ಪ್ರವರ್ತಕರು ಮತ್ತು ಖರೀದಿದಾರರ ನಡುವೆ ವಿವಾದ ಉಂಟಾದರೆ ಅಂತಹ ಸಂದರ್ಭಗಳಲ್ಲಿ ಖರೀದಿದಾರರು ಕರ್ನಾಟಕ ರೇರಾ ಪ್ರಾಧಿಕಾರದಲ್ಲಿ ರಚಿಸಿರುವ ಸಿ.ಡಿ.ಆರ್. ಸೆಲ್ ಮುಖೇನ ಅವರುಗಳು ಪರಿಹಾರ ಪಡೆಯಬಹುದಾಗಿದೆ.

<table>
<tr><td>ಇ</td><td>ಈ ಪ್ರಾಧಿಕಾರದಡಿ ನೋಂದಾಯಿತವಾಗಿ ರುವ ರಿಯಲ್ ಎಸ್ಟೇಟ್ ಸಂಸ್ಥೆಗಳು ಎಷ್ಟು;</td><td>ಪ್ರಾಧಿಕಾರದಲ್ಲಿ ರಿಯಲ್ ಎಸ್ಟೇಟ್ ಯೋಜನೆಗಳನ್ನು ನೋಂದಾಯಿಸಲಾಗುತ್ತಿದ್ದು, ದಿನಾಂಕ 29.09.2020 ರವರೆಗೆ 4,259 ಯೋಜನೆಗಳು ನೋಂದಾಯಿತವಾಗಿರುತ್ತವೆ.</td></tr>
<tr><td>ಈ</td><td>ಈ ಪ್ರಾಧಿಕಾರದಡಿ ನೋಂದಾಯಿತವಾಗಿ ರುವ ಯೋಜನೆಗಳೆಷ್ಟು; ಅವುಗಳಲ್ಲಿ ಎಷ್ಟು ಯೋಜನೆಗಳು ನಿಗಧಿತ ಅವಧಿಯೊಳಗೆ ಪೂರ್ಣಗೊಂಡಿವೆ; ಎಷ್ಟು ಯೋಜನೆಗಳು ಅವಧಿಯೊಳಗೆ ಪೂರ್ಣಗೊಂಡಿಲ್ಲ; ಇದಕ್ಕೆ ಕಾರಣಗಳೇನು;</td><td>ಪ್ರಾಧಿಕಾರದಿಂದ ದಿನಾಂಕ 29.09/03.10.2020ರ ಪತ್ರದೊಂದಿಗೆ ಸ್ವೀಕೃತವಾದ ವರದಿಯಂತೆ ಈ ಕೆಳಕಂಡಂತೆ ಯೋಜನೆಗಳು ನೋಂದಾಯಿತವಾಗಿವೆ:-

<table>
<tr><th>ಕ್ರ. ಸಂ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಅನುಮೋದನೆಗೊಂಡ ಯೋಜನೆಗಳು
(ಅ) ಪೂರ್ಣಗೊಂಡ ಯೋಜನೆಗಳು - 785
(ಆ) ಮುಂದುವರೆದ ಯೋಜನೆಗಳು - 1,773
(ಇ) ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದ ಯೋಜನೆಗಳು - 846
(ಈ) ಅವಧಿ ವಿಸ್ತರಣೆ ಕೋರಿ ಸ್ವೀಕೃತವಾದ ಮನವಿಗಳ ಸಂಖ್ಯೆ - 174</td><td>3,578</td></tr>
<tr><td>2</td><td>ತಿರಸ್ಕೃತ ಯೋಜನೆಗಳು</td><td>170</td></tr>
<tr><td>3</td><td>ಪ್ರವರ್ತಕರು ಹಿಂದಕ್ಕೆ ಪಡೆದ ಯೋಜನೆಗಳು</td><td>126</td></tr>
<tr><td>4</td><td>ನೋಂದಣಿಗಾಗಿ ಪರಿಶೀಲನಾ ಹಂತದಲ್ಲಿರುವ ಯೋಜನೆಗಳ ಸಂಖ್ಯೆ</td><td>385</td></tr>
<tr><td></td><td>ಪ್ರಾಧಿಕಾರದಲ್ಲಿ ನೋಂದಣಿಗಾಗಿ ಸ್ವೀಕೃತವಾದ ಒಟ್ಟು ಯೋಜನೆಗಳ ಸಂಖ್ಯೆ</td><td>4,259</td></tr>
<tr><td colspan="3">(ದಿನಾಂಕ 29.09.2020 ರಂದು ಇದ್ದಂತೆ)</td></tr>
</table>

ಯೋಜನೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದಿರುವುದಕ್ಕೆ ಕಾರಣಗಳು ಈ ಕೆಳಕಂಡಂತಿವೆ:-

<table>
<tr><td>1.</td><td>ಹಣಕಾಸಿನ ಮುಗ್ಗಟ್ಟು;</td></tr>
<tr><td>2.</td><td>ಕಾರ್ಮಿಕರ ಕೊರತೆ;</td></tr>
<tr><td>3.</td><td>ಕಚ್ಚಾ ಸಾಮಗ್ರಿಗಳ ಅಲಭ್ಯತೆ ಹಾಗೂ ಅವುಗಳ ಬೆಲೆಯಲ್ಲಿನ ಹೆಚ್ಚಳ;</td></tr>
<tr><td>4.</td><td>ಭೂ ವಿವಾದ;</td></tr>
<tr><td>5.</td><td>ಇತ್ತೀಚಿನ ಕೋವಿಡ್-19 ಎಂಬ ಸಾಂಕ್ರಾಮಿಕ ಖಾಯಿಲೆ (ರೋಗ);</td></tr>
<tr><td>6.</td><td>ಪರಿಷ್ಕೃತ ಯೋಜನೆ;</td></tr>
<tr><td>7.</td><td>ವ್ಯಾಜ್ಯಗಳು;</td></tr>
<tr><td>8.</td><td>ನಿರ್ಮಾಣದ ಹಂತದಲ್ಲಿ ಎದುರಾಗುವ ಪ್ರಾಕೃತಿಕ ಅಡಚಣೆಗಳು; ಹಾಗೂ</td></tr>
<tr><td>9.</td><td>ನಿರ್ಮಾಣದ ಹಂತದಲ್ಲಿ ಎದುರಾಗುವ ನೈಸರ್ಗಿಕ ವಿಕೋಪಗಳು ನಿಗದಿತ ಅವಧಿಯೊಳಗೆ ಪ್ರವರ್ತಕರು ಪೂರ್ಣಗೊಳಿಸದಿದ್ದಲ್ಲಿ ಗೃಹ ಖರೀದಿದಾರರು ಪ್ರವರ್ತಕರ ವಿರುದ್ಧ ವಿಳಂಬದ ಬಗ್ಗೆ ದೂರು ದಾಖಲಿಸಲು ಕಾಯ್ದೆ ಮತ್ತು ನಿಯಮಗಳಲ್ಲಿ ಅವಕಾಶವಿರುತ್ತದೆ. ಇದಲ್ಲದೆ, ಪ್ರವರ್ತಕರಿಂದ ಆದ ವಿಳಂಬಕ್ಕೆ ದಂಡ ವಿಧಿಸಲು ಹಾಗೂ ಸಂಬಂಧಿಸಿದ ಬಾಧಿತರಿಗೆ ಪರಿಹಾರ ಒದಗಿಸಲು ರೇರಾ ಕಾಯ್ದೆ / ನಿಯಮಗಳಲ್ಲಿ ಅವಕಾಶವಿರುತ್ತದೆ.</td></tr>
</table></td></tr>
</table>

ಉ	ಈ ಪ್ರಾಧಿಕಾರ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆಯೇ; ಸ್ಥಾಪನೆಯ ಉದ್ದೇಶ ಈಡೇರಿದೆ ಎಂದು ಸರ್ಕಾರಕ್ಕೆ ಅನಿಸುತ್ತಿದೆಯೆ?	ಹೌದು, ಪ್ರಾಧಿಕಾರವು ಕೇಂದ್ರ ಸರ್ಕಾರದ ರೇರಾ ಕಾಯ್ದೆಯನ್ವಯ ಸ್ಥಾಪಿತವಾದ ಪ್ರಾಧಿಕಾರವಾಗಿದ್ದು, ಮೊದಲಿಗೆ ದಿನಾಂಕ 14.07.2016 ರಿಂದ ಮಧ್ಯಂತರ ಪ್ರಾಧಿಕಾರವಾಗಿ ಮತ್ತು ದಿನಾಂಕ 05.03.2019 ರಿಂದ ಖಾಯಂ ಪ್ರಾಧಿಕಾರವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಕಾರಣದಿಂದಾಗಿ, ಅದರ ಸ್ಥಾಪನೆಯ ಉದ್ದೇಶ ಈಡೇರಿದೆ ಹಾಗೂ ಈಡೇರುತ್ತಿದೆ ಎಂಬುದಾಗಿ ಭಾವಿಸಲಾಗಿದೆ.

[ಸಂಖ್ಯೆ: ವಇ 53 ರೇರಾ 2020]

(ವಿ. ಸೋಮಣ್ಣ)
ವಸತಿ ಸಚಿವರು.

ಕರ್ನಾಟಕ ಸರ್ಕಾರ

ಸಂ: ಟಿಡಿ 201 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:29.10.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು,
ಉತ್ತರಿಸುವ ದಿನಾಂಕ : 30.09.2020.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವೇದವ್ಯಾಸ್ ಕಾಮತ್ ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2090 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/7ಅ/ಚುಗು-ಚುರ.ಪ್ರಶ್ನೆ/08/2020, ದಿನಾಂಕ:23.09.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವೇದವ್ಯಾಸ್ ಕಾಮತ್ ಡಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2090 ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

Received on
D-2/11/2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2090

ಸದಸ್ಯರ ಹೆಸರು : ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 30.09.2020

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಗಳೂರು ನಗರ ವ್ಯಾಪ್ತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಕೊರತೆಯಿದ್ದು, ಬಸ್ಸುಗಳನ್ನು ಒದಗಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಗಳೂರು ನಗರ ವ್ಯಾಪ್ತಿಯಲ್ಲಿ 36 ಅನುಸೂಚಿ ಕಾರ್ಯಾಚರಣೆಯನ್ನು 38 ವಾಹನ ಬಲದಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, 2 ಹೆಚ್ಚುವರಿ ವಾಹನಗಳಿರುತ್ತವೆ. ಮಂಗಳೂರು ನಗರ ವ್ಯಾಪ್ತಿಯಲ್ಲಿ ಬಸ್ಸುಗಳ ಕೊರತೆ ಇಲ್ಲದಿರುವುದರಿಂದ, ಹೊಸ ನಗರ ಸಾರಿಗೆ ವಾಹನಗಳನ್ನು ಪೂರೈಸಿರುವುದಿಲ್ಲ.
ಆ	ಬಂದಿದ್ದಲ್ಲಿ, ಸದರಿ ಬಸ್ಸುಗಳ ಕೊರತೆಯನ್ನು ಸರಿದೂಗಿಸಲು ಎಷ್ಟು ಹೊಸ ಬಸ್ಸುಗಳನ್ನು ಪೂರೈಸಲಾಗಿದೆ;	
ಇ	2018ರಿಂದ ಪ್ರಸಕ್ತ ಸಾಲಿನವರೆಗೆ ಎಷ್ಟು ಹೊಸ ಬಸ್ಸುಗಳನ್ನು ಮಂಜೂರು ಮಾಡಲಾಗಿದೆ (ವರ್ಷವಾರು ಮಾಹಿತಿ ನೀಡುವುದು)?	2018ರಿಂದ ಪ್ರಸಕ್ತ ಸಾಲಿನವರೆಗೂ ಮಂಗಳೂರು ವಿಭಾಗಕ್ಕೆ ವಿವಿಧ ಮಾದರಿಯ ಒಟ್ಟು 136 ಹೊಸ ವಾಹನಗಳನ್ನು ಒದಗಿಸಲಾಗಿದ್ದು, ವರ್ಷವಾರು ವಿವರ ಈ ಕೆಳಕಂಡಂತಿರುತ್ತದೆ. • 2018-19 – 24 • 2019-20 – 87 • 2020-21 – 25

ಸಂಖ್ಯೆ: ಟಿಡಿ 201 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 233 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:02.11.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ರಾಮದಾಸ್ ಎಸ್.ಎ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1940ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನ ಸಭೆ ಸಚಿವಾಲಯದ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/7ಅ/ಪ್ರಸಂ/1940/2020, ದಿ:16.09.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ರಾಮದಾಸ್ ಎಸ್.ಎ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1940ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

G.H. Saroja
(ಜಿ.ಹೆಚ್.ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2816

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1940
ಮಾನ್ಯ ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ರಾಮದಾಸ್ ಎಸ್. ಎ.
ಉತ್ತರಿಸಬೇಕಾದ ದಿನಾಂಕ	:	30.09.2020
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿರಿಯ ನಾಗರೀಕರ ಸಬಲೀಕರಣಕ್ಕಾಗಿ ಯಾವ ಯೋಜನೆಗಳ ಮೂಲಕ ಸಹಾಯ ಮಾಡಲಾಗುತ್ತಿದೆ; ರಾಜ್ಯದಲ್ಲಿ ಎಷ್ಟು ಜನ ಹಿರಿಯ ನಾಗರೀಕರಿಗೆ ಎಷ್ಟು ಸಂಸ್ಥೆಗಳ ಮೂಲಕ ಸಹಾಯ ಮಾಡಲಾಗುತ್ತಿದೆ;	ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾವತಿಯಿಂದ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳಿಂದ ಸಹಾಯವನ್ನು ನೀಡಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. 2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಟ್ಟು 61095297 ಜನಸಂಖ್ಯೆಯಲ್ಲಿ ಶೇ.9.60ರಷ್ಟು ಜನ 60 ವರ್ಷ ಮೀರಿರುವ ಹಿರಿಯ ನಾಗರಿಕರಿದ್ದು, 128 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಇಲಾಖೆಯ ಯೋಜನೆಗಳ ಪ್ರಯೋಜನವನ್ನು ಪಡೆಯುತ್ತಿದ್ದಾರೆ
ಆ)	ಪ್ರಸ್ತುತ ವರ್ಷದಲ್ಲಿ ಹಿರಿಯ ನಾಗರೀಕರಿಗಾಗಿ ಡೇ-ಕೇರ್ ಸೆಂಟರ್‌ಗಳನ್ನು ತೆರೆಯಲು ಉದ್ದೇಶಿಸಲಾಗಿದೆಯೇ; ಮತ್ತು ಅದಕ್ಕಾಗಿ ಸರ್ಕಾರವು ನಿಗದಿಪಡಿಸಿರುವ ಅನುದಾನವೆಷ್ಟು?	2020-21ನೇ ಸಾಲಿನಲ್ಲಿ ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿರುವುದಿಲ್ಲ ಹಾಗೂ ಅದಕ್ಕಾಗಿ ಅನುದಾನವು ನಿಗದಿಯಾಗಿರುವುದಿಲ್ಲ.

ಸಂಖ್ಯೆ: ಮಮಇ 233 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರಾಮದಾಸ್ ಎಸ್. ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1940ಕ್ಕೆ ಅನುಬಂಧ

ಹಿರಿಯ ನಾಗರಿಕರಿಗೆ ಇಲಾಖೆಯಿಂದ ಹಮ್ಮಿಕೊಂಡಿರುವ ಯೋಜನೆಗಳ ವಿವರಗಳು

2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿನ ಒಟ್ಟು ಜನಸಂಖ್ಯೆಯ ಶೇ.9.60ರಷ್ಟು ಜನ 60 ವರ್ಷ ಮೀರಿದವರಾಗಿರುತ್ತಾರೆ. ಜನ ಸಾಮಾನ್ಯರಿಗೆ ಸರ್ಕಾರವು ಆರೋಗ್ಯ ಪಾಲನೆ ಹಾಗೂ ಇನ್ನಿತರ ಸಂಬಂಧಿತ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ಜೀವಿತಾವಧಿಯು ಉತ್ತಮಗೊಂಡಿರುತ್ತದೆ. ಈಗಿನ ಸುಧಾರಿತ ಜೀವಿತಾವಧಿಯ ಆರೋಗ್ಯ ಪಾಲನೆ ಮತ್ತು ಸಾಮಾನ್ಯ ಜನತೆಗಾಗಿ ಭಾರತ ಸಂವಿಧಾನದ ಅನುಚ್ಛೇದ 41ರ ಅಡಿಯಲ್ಲಿ ಪ್ರಕಟಪಡಿಸಿದಂತೆ ತನ್ನ ಹಿರಿಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸಿ ಕೊಡುವುದನ್ನು ಖಚಿತಪಡಿಸಿಕೊಳ್ಳುವ ಧ್ಯೇಯದಿಂದ ಕರ್ನಾಟಕ ರಾಜ್ಯವು ಹಿರಿಯ ನಾಗರಿಕರಿಗಾಗಿ ಸರ್ಕಾರಿ ಆದೇಶ ಸಂಖ್ಯೆ:ಮಮಇ/314/ಎಸ್.ಜೆ.ಡಿ/2003ದಿನಾಂಕ:05-09-2003ರನ್ವಯ ಕಾರ್ಯನೀತಿಯನ್ನು ರೂಪಿಸಿದೆ.

ರಾಜ್ಯ ನೀತಿಯ ಉದ್ದೇಶ:

- ಹಿರಿಯ ನಾಗರಿಕರ ಹಕ್ಕುಗಳ ಸಂರಕ್ಷಣೆ.
- ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ, ಆರೋಗ್ಯ ಸೌಲಭ್ಯಗಳು ಹಾಗೂ ಆಶ್ರಯವನ್ನು ಒದಗಿಸುವುದು.
- ಹಿರಿಯ ನಾಗರಿಕರನ್ನು ನಿಂದಿಸುವ ಮತ್ತು ಅವರನ್ನು ಅನುಚಿತವಾಗಿ ಉಪಯೋಗಿಸಿಕೊಳ್ಳುವುದರ ವಿರುದ್ಧ ರಕ್ಷಣೆ ಒದಗಿಸುವುದು.
- ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ವೃದ್ಧರಿಗೆ ನಗರ ಪ್ರದೇಶಗಳಲ್ಲಿರುವಂತೆ ಸಮಾನ ಅವಕಾಶಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸುವುದು.
- ಹಿರಿಯ ನಾಗರಿಕರು ರಚನಾತ್ಮಕ, ಸುಭಿಕ್ಷ ಮತ್ತು ತೃಪ್ತಿಕರ ಜೀವನವನ್ನು ನಡೆಸಲು ಅವಕಾಶಗಳನ್ನು ನೀಡುವುದು.
- ಹಿರಿಯ ನಾಗರಿಕರೂ ಸಹ ಸಂಪನ್ಮೂಲ ವ್ಯಕ್ತಿಗಳಾಗಿದ್ದು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತ ಸೇವೆಯನ್ನು ಸಲ್ಲಿಸಿರುತ್ತಾರೆ ಎಂಬುದನ್ನು ರಾಜ್ಯವು ಗುರುತಿಸುತ್ತದೆ.
- ಈ ನೀತಿಯು ವಯಸ್ಸಾದ ಹಿರಿಯರ ಕಲ್ಯಾಣಕ್ಕಾಗಿ ಆಯವ್ಯಯ ಹಂಚಿಕೆಯನ್ನು ಮಾಡುವ ಪ್ರಾಮುಖ್ಯತೆಯನ್ನು ಮನಗಂಡಿದೆ.
- ರಾಜ್ಯ ವೃದ್ಧಾಪ್ಯ ನೀತಿಯು ಹಿರಿಯರ ಆರೋಗ್ಯ ಕ್ಷೇಮಾಭಿವೃದ್ಧಿ, ಆರ್ಥಿಕ ಭದ್ರತೆ, ವಸತಿ ಮತ್ತು ಆಶ್ರಯ, ಆಸ್ತಿ ಮತ್ತು ಜೀವದ ರಕ್ಷಣೆ ತೆಗೆದುಕೊಳ್ಳಬೇಕಾದ ಇತರೆ ಕ್ಷೇತ್ರಗಳು ಮತ್ತು ಅನುಷ್ಠಾನ ಎಂಬ ಅನುಚ್ಛೇದಗಳನ್ನು ಹೊಂದಿದೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು (ಟಾಸ್ಕ್ ಫೋರ್ಸ್‌ಅನ್ನು) ರಚಿಸಿದ್ದು, ಕಾರ್ಯಪಡೆಯು ರಾಜ್ಯ ನೀತಿಯ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸುತ್ತಿದೆ.

ರಾಜ್ಯ ಸರ್ಕಾರವು ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳು

1. **ವೃದ್ಧಾಶ್ರಮಗಳು:**

ರಾಜ್ಯದ 30 ಜಿಲ್ಲೆಗಳಲ್ಲಿ 29 ವೃದ್ಧಾಶ್ರಮಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡಲಾಗುತ್ತಿದೆ ಹಾಗೂ 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವಂತೆ 52 ಕಂದಾಯ ಉಪ ವಿಭಾಗಗಳಿಗೆ ವೃದ್ಧಾಶ್ರಮಗಳನ್ನು ಹೆಚ್ಚಿಸಿ ಘೋಷಿಸಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ 25 ವೃದ್ಧರು ಇರುವ ಒಂದು ಘಟಕಕ್ಕೆ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ನೀಡಲಾಗುತ್ತದೆ. ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನಾಥ ನಿರ್ಗತಿಕ ಹಾಗೂ ಬಡತನ ರೇಖೆಗಿಂತ ಕೆಳಗಿರುವ ವೃದ್ಧರು ಈ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

..2

2. **ಹಿರಿಯ ನಾಗರಿಕರಿಗೆ ಸಹಾಯವಾಣಿ ಕೇಂದ್ರಗಳು:** (ಶುಲ್ಕ ರಹಿತ ದೂರವಾಣಿ ಸಂಖ್ಯೆ:1090)

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ದಿನದ 24 ಗಂಟೆ ನಡೆಸಲಾಗುತ್ತಿದೆ. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಆವರ್ತಕ ಹಾಗೂ ಅನಾವರ್ತಕ ವೆಚ್ಚಗಳು ಸೇರಿ ವಾರ್ಷಿಕ ರೂ.7.15ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದೆ. 2016-17ನೇ ಸಾಲಿನಿಂದ ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗಿದೆ.

3. **ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯದ ಉಡುಪಿ, ರಾಮನಗರ, ಬೀದರ್, ತುಮಕೂರು, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 25 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 26 ಹಗಲು ಯೋಗಕ್ಷೇಮ ಕೇಂದ್ರಗಳನ್ನು (ಬೆಂಗಳೂರಿನಲ್ಲಿ 2) ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ಪ್ರತಿ ಕೇಂದ್ರದಲ್ಲಿ 50 ರಿಂದ 150 ವಯೋವೃದ್ಧರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಸದರಿ ಯೋಜನೆಗೆ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಹಗಲು ಯೋಗಕ್ಷೇಮ ಕೇಂದ್ರಗಳ ಮಂಜೂರಾತಿಗೆ 2016-17ನೇ ಸಾಲಿನಿಂದ ಆನ್‌ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದೆ.

4. **ಹಿರಿಯ ನಾಗರಿಕರಿಗೆ ಸಾಧನ ಸಲಕರಣೆ ವಿತರಣೆ ಯೋಜನೆ:**

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬಡತನ ರೇಖೆಗಿಂತ ಕೆಳಗಿರುವ 20000 ಹಿರಿಯ ನಾಗರಿಕರಿಗೆ ಸಾಧನ ಸಲಕರಣೆ ವಿತರಣೆ ಯೋಜನೆಯನ್ನು ಘೋಷಣೆ ಮಾಡಲಾಗಿರುತ್ತದೆ. ಈ ಯೋಜನೆಯಡಿ ಹಿರಿಯ ನಾಗರಿಕರಿಗೆ ಅವಶ್ಯಕತೆಗನುಸಾರವಾಗಿ ಕನ್ನಡಕ, ಬೇಕಾದ ಅಳತೆಗೆ ತಕ್ಕಂತೆ ಮಾರ್ಪಾಡು ಮಾಡಬಹುದಾದ ಊರುಗೋಲು, ಟ್ರೈಪಾಡ್, ಶ್ರವಣ ಸಾಧನ, ವಾಕರ್ ಮತ್ತು ಕಮೋಡ್‌ಗಳನ್ನು ಇ-ಟೆಂಡರ್ ಮೂಲಕ ಆಯ್ಕೆಯಾದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರಕ್ಕೆ ಒಳಪಟ್ಟ ಸಂಸ್ಥೆಗಳಿಂದ ಖರೀದಿಸಿ ವಿತರಿಸುವ ಯೋಜನೆಯಾಗಿರುತ್ತದೆ.

(**ಸಂಪರ್ಕಿಸಬೇಕಾದವರು:** ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು)

5. **ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು :**

60 ವರ್ಷ ಮೇಲ್ಪಟ್ಟ ವಯೋಮಾನದ ಎಲ್ಲಾ ಹಿರಿಯ ನಾಗರಿಕರಿಗೆ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ, ಇ-ಆಡಳಿತ ಇಲಾಖೆಯ ಸೇವಾ ಸಿಂಧು ಯೋಜನೆಯಡಿ ಆನ್-ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಗುರುತಿನ ಚೀಟಿಗಳನ್ನು ಆನ್-ಲೈನ್ ವಿತರಿಸಲಾಗುತ್ತಿದೆ.

6. **ವೃದ್ಧಾಪ್ಯ ವೇತನ:**

- **ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ:**

ಈ ಯೋಜನೆಯಡಿ 60 ರಿಂದ 64 ವರ್ಷದೊಳಗಿನ ವೃದ್ಧರಿಗೆ ಮಾಹೆಯಾನ ರೂ.600/- (ರೂಪಾಯಿ ಆರು ನೂರು ಮಾತ್ರ)ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.

65 ವರ್ಷ ಮೇಲ್ಪಟ್ಟ ವೃದ್ಧರಿಗೆ ರೂ.1000/- (ರೂಪಾಯಿ ಒಂದು ಸಾವಿರ ಮಾತ್ರ) ಗಳ ಪಿಂಚಣಿಯನ್ನು ಆಯಾ ತಾಲ್ಲೂಕಿನ ಕಂದಾಯ ಇಲಾಖೆಯ ತಹಶೀಲ್ದಾರರ ಕಛೇರಿ ವತಿಯಿಂದ ನೀಡಲಾಗುತ್ತಿದೆ.

- **ಸಂಧ್ಯಾ ಸುರಕ್ಷ ಯೋಜನೆ:**

ಈ ಯೋಜನೆಯಡಿ ಸಾಮಾಜಿಕ ಭದ್ರತಾ ರೂಪದಲ್ಲಿ 65 ವರ್ಷ ಮೇಲ್ಪಟ್ಟ ವೃದ್ಧರಿಗೆ ರಾಜ್ಯ ಸರ್ಕಾರದಿಂದ ಮಾಹೆಯಾನ ರೂ.1000/-(ರೂಪಾಯಿ ಒಂದು ಸಾವಿರಗಳು ಮಾತ್ರ)ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.

ಅರ್ಹತೆಗಳು:

1. 65 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
2. ಸ್ಥಳೀಯ ಕಂದಾಯ ಅಧಿಕಾರಿಗಳ ದೃಢೀಕರಣದಂತೆ ಮನವಿದಾರರ ಮತ್ತು ಅವರ ಪತಿ ಅಥವಾ ಪತ್ನಿಯರ ವಾರ್ಷಿಕ ಆದಾಯವು ರೂ.20,000/-ಕ್ಕಿಂತ ಹೆಚ್ಚಾಗಿರಬಾರದು.
3. ಮಕ್ಕಳ ಆದಾಯವು ತಂದೆ ತಾಯಿಯರ ವಾರ್ಷಿಕ ಆದಾಯಕ್ಕೆ ಪರಿಗಣಿಸಲ್ಪಡುವುದಿಲ್ಲ.
4. ಪತಿ ಅಥವಾ ಪತ್ನಿಯ ಜಂಟಿ ಖಾತೆಯಲ್ಲಿ ರೂ.10,000/-ಕ್ಕಿಂತ ಹೆಚ್ಚಿನ ಠೇವಣಿ ಇರಬಾರದು.
5. ಯಾವುದೇ ರೀತಿಯ ಇತರ ಮಾಸಾಶನ/ಪಿಂಚಣಿಯನ್ನು ಪಡೆಯುತ್ತಿರುವವರು ಈ ವೇತನಕ್ಕೆ ಅರ್ಹರಾಗಿರುವುದಿಲ್ಲ.
6. ಈ ಕೆಳಗಿನ ವಲಯಗಳಲ್ಲಿ ಇರುವ ಅಭ್ಯರ್ಥಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ.

ಅತಿ ಸಣ್ಣ ರೈತರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಮೀನುಗಾರರು, ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು ಆದರೆ ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರೆಂದರೆ Regulation of Employment and conditions of services Act 1996 ಇದರ ಪ್ರಕಾರ ಅರ್ಹರಿರುವುದಿಲ್ಲ. ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರನ್ನು ಸಂಪರ್ಕಿಸಬಹುದು.

7. ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಯೋಜನೆ:

ರಾಜ್ಯ ಸಾರಿಗೆ ಹಾಗೂ ನಗರ ಸಾರಿಗೆ ಬಸ್‌ಗಳಲ್ಲಿ 60 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ಶೇ.25ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಹಿರಿಯ ನಾಗರಿಕರು ಇಲಾಖೆ ವತಿಯಿಂದ ನೀಡಲಾಗುವ ಗುರುತಿನ ಚೀಟಿ, ಚುನಾವಣಾ ಗುರುತಿನ ಚೀಟಿ, ಚಾಲನಾ ಪರವಾನಗಿ ಇವುಗಳಲ್ಲಿ ಯಾವುದಾದರೊಂದನ್ನು ಇಲ್ಲವೆ ಕೆ.ಎಸ್.ಆರ್.ಟಿ.ಸಿ.ಯಿಂದ ವಿತರಿಸಲಾದ ಗುರುತಿನ ಚೀಟಿ ಇವುಗಳನ್ನು ತೋರಿಸಬೇಕಾಗುತ್ತದೆ.

8. ಜೀರಿಯಾಟ್ರಿಕ್ ಕೇಂದ್ರಗಳು:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ರಾಜ್ಯ ಯೋಜನೆಯಡಿ ಕೋಲಾರ, ತುಮಕೂರು, ಬಿಜಾಪುರ, ಕೊಡಗು, ಚಿಕ್ಕಮಗಳೂರು ಮತ್ತು ಧಾರವಾಡ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಜೀರಿಯಾಟ್ರಿಕ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಉಚಿತವಾಗಿ ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದ ಯೋಜನೆಗಳು

1. ವೃದ್ಧಾಶ್ರಮಗಳು:

ಕೇಂದ್ರ ಅನುದಾನ ಯೋಜನೆಯಡಿ ರಾಜ್ಯದಲ್ಲಿ 44 ವೃದ್ಧಾಶ್ರಮಗಳಿಗೆ ಅನುದಾನವನ್ನು ಮಂಜೂರು ಮಾಡುತ್ತಿದ್ದು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ.

2. ಸಂಚಾರಿ ಆರೋಗ್ಯ ಘಟಕಗಳು:

ಸ್ವಯಂ ಸೇವಾ ಸಂಸ್ಥೆಗಳು ಸಂಚಾರಿ ಆರೋಗ್ಯ ಘಟಕಗಳನ್ನು ನಡೆಸಲು ಮುಂದೆ ಬಂದಲ್ಲಿ ಕೇಂದ್ರ ಸರ್ಕಾರವು ಅನುದಾನ ನೀಡುವುದು. ರಾಜ್ಯದ ಕೋಲಾರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ಸಂಚಾರಿ ಆರೋಗ್ಯ ಘಟಕ ನಡೆಸಲಾಗುತ್ತಿದೆ.

..4

3. ಡಿಮೆನ್ಷಿಯಾ ಹಗಲು ಯೋಗಕ್ಷೇಮ ಕೇಂದ್ರ:

ಮರೆಗುಳಿತನದಿಂದ ಬಳಲುತ್ತಿರುವ ಹಿರಿಯ ನಾಗರಿಕರಿಗೆ ಚಿಕಿತ್ಸಾ ಸೌಲಭ್ಯ ನೀಡಲು ಕೇಂದ್ರ ಸರ್ಕಾರದ ವತಿಯಿಂದ ಡಿಮೆನ್ಷಿಯಾ ಹಗಲು ಯೋಗಕ್ಷೇಮ ಕೇಂದ್ರವನ್ನು ನಡೆಸುತ್ತಿದ್ದು, ದಾವಣಗೆರೆಯಲ್ಲಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ಒಂದು ಕೇಂದ್ರ ನಡೆಯುತ್ತಿದೆ.

4. ಪ್ರಾಂತೀಯ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ:

ನೈಟಿಂಗೇಲ್ ಮೆಡಿಕಲ್ ಟ್ರಸ್ಟ್ (ರಿ), ಬೆಂಗಳೂರು ಸಂಸ್ಥೆಯ ವತಿಯಿಂದ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳಲ್ಲಿ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂದಿಗಳಿಗೆ ತರಬೇತಿಯನ್ನು ಆಯೋಜಿಸಲಾಗುತ್ತಿದೆ.

5. ರಾಷ್ಟ್ರೀಯ ವಯೋಶ್ರೀ ಯೋಜನೆ:

ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಮೂಲಕ ಈ ಯೋಜನೆಯು 2017ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗೆ ಹಾಗೂ ವೃದ್ಧಾಪ್ಯಕ್ಕೆ ಸಂಬಂಧಿಸಿದ ಅಂಗವಿಕಲತೆ, ದೃಷ್ಟಿಮಾಂದ್ಯ, ಶ್ರವಣದೋಷ, ದಂತಗಳ ಉದುರುವಿಕೆ ಮತ್ತು ಚಲನ ವೈಕಲ್ಯತೆ ಹೊಂದಿರುವವರಿಗೆ ಸದ್ಯದಲ್ಲಿ ಬೆಂಗಳೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ವೃದ್ಧರಿಗೆ ಅವಶ್ಯವಿರುವ ಸಾಧನ ಸಲಕರಣಗಳನ್ನು ಅಂದಾಜು ಮಾಡಿ ಕೇಂದ್ರ ಸರ್ಕಾರದಡಿ ಸಾರ್ವಜನಿಕ ಉದ್ದಿಮೆಯಾಗಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಕೃತಕ ಅಂಗಾಂಗಳ ಉತ್ಪಾದನಾ ನಿಗಮ(ಅಲಿಂಕೋ) ಸಂಸ್ಥೆಯ ವತಿಯಿಂದ ಉಚಿತವಾಗಿ ವಿತರಿಸಲಾಗುವುದು.

6. ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007

ಕೇಂದ್ರ ಸರ್ಕಾರವು ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007ನ್ನು ಜಾರಿಗೊಳಿಸಿದ್ದು, ಇದನ್ನು ದಿನಾಂಕ:01-04-2008ರಿಂದ ರಾಜ್ಯ ಸರ್ಕಾರದಲ್ಲಿ ಜಾರಿಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರತಿ ಕಂದಾಯ ಉಪವಿಭಾಗದಲ್ಲಿ ಒಂದು ನ್ಯಾಯಮಂಡಳಿಯನ್ನು ಸ್ಥಾಪಿಸಲಾಗಿದೆ ಹಾಗೂ ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (2)ರನ್ವಯ ನಿರ್ವಹಣಾ ಮಂಡಳಿಯ ಅಧ್ಯಕ್ಷರನ್ನಾಗಿ ಆಯಾ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರನ್ನು (ಉಪ ವಿಭಾಗಾಧಿಕಾರಿರವರನ್ನು) ನೇಮಕ ಮಾಡಲಾಗಿದೆ.

ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯಿದೆ 2007(ಕೇಂದ್ರ ಶಾಸನ 2007ರ ನಿಯಮ-56) ಪರಿಚ್ಛೇದ 7ರನ್ವಯ ಸ್ಥಾಪಿಸಿರುವ ನಿರ್ವಹಣಾ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಅಂಗೀಕರಿಸಲು ನಿಯಮ 15ರ ಉಪನಿಯಮ(1)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಪ್ರತಿ ಜಿಲ್ಲೆಗೆ ಒಂದರಂತೆ "ಮೇಲ್ಮನವಿ ನ್ಯಾಯಮಂಡಳಿ"ಯನ್ನು ಹಾಗೂ ಸದರಿ ಕಾಯ್ದೆಯ ಸೆಕ್ಷನ್ 15 ಉಪನಿಯಮ 2ರನ್ವಯ ಮೇಲ್ಮನವಿ ನ್ಯಾಯಮಂಡಳಿಯ" ಅಧ್ಯಕ್ಷರನ್ನಾಗಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007(ಕೇಂದ್ರ ಶಾಸನ 2007ರ ನಿಯಮ-56)ರ ಕಾಯ್ದೆಯ ಪರಿಚ್ಛೇದ 18(1)ರನ್ವಯ ಆಯಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ನಿರ್ವಹಣಾಧಿಕಾರಿಗಳೆಂದು ಪದನಾಮಗೊಳಿಸಿ ಸರ್ಕಾರವು ದಿ: 13-09-2010ರಂದು ಆದೇಶಿಸಿದೆ.

ಸದರಿ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಪರಿಷತ್ ಹಾಗೂ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ದಿ:22-08-2011ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಮಮಇ/11/ಪಿಹೆಚ್‌ಪಿ/2012 ದಿನಾಂಕ:23-09-2013ರಲ್ಲಿ ಸರ್ಕಾರೇತರ ಸದಸ್ಯರನ್ನು ಸೇರಿದಂತೆ ರಾಜ್ಯ ಪರಿಷತ್‌ನ ಸದಸ್ಯರನ್ನು ನೇಮಕ ಮಾಡಲಾಗಿರುತ್ತದೆ. ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಲಾಗಿರುತ್ತದೆ.

***

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 236 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:02.11.2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು–1.

ಇವರಿಗೆ;
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು–560 001.

ಮಾನ್ಯರೆ,

ವಿಷಯ: ಶ್ರೀ ಅನಿಲ್ ಚಿಕ್ಕಮಾದು, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2075ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನ ಸಭೆ ಸಚಿವಾಲಯದ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/7ಅ/ಪ್ರ.ಸಂ/2075/2020, ದಿ:19.09.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಅನಿಲ್ ಚಿಕ್ಕಮಾದು, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2075ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

G.H. Sarojamma
(ಜಿ.ಹೆಚ್.ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ – 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2816

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2075
ಮಾನ್ಯ ವಿಧಾನಸಭೆ ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು
ಉತ್ತರಿಸಬೇಕಾದ ದಿನಾಂಕ : 30.09.2020
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ವಿಕಲಚೇತನರಿಗೆ ಸರಿಯಾದ ಸಮಯಕ್ಕೆ ಸರ್ಕಾರದಿಂದ ಸೌಲಭ್ಯಗಳು ಸಿಗದೆ, ಸೌಲಭ್ಯ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಇವರುಗಳಿಗೆ ಒದಗಿಸಿರುವ ಸೌಲಭ್ಯಗಳೇನು; ಹಾಗೂ ಸರಿಯಾದ ಸಮಯದಲ್ಲಿ ಸೌಲಭ್ಯಗಳನ್ನು ಅವರಿಗೆ ಒದಗಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ರಾಜ್ಯದಲ್ಲಿರುವ ವಿಕಲಚೇತನರಿಗೆ ಸರಿಯಾದ ಸಮಯಕ್ಕೆ ಸರ್ಕಾರದಿಂದ ಸೌಲಭ್ಯಗಳು ಸಿಗದೆ, ಸೌಲಭ್ಯ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಿಕಲಚೇತನರ ಪಿಂಚಣಿಯು ನಿಗದಿತ ಅವಧಿಯಲ್ಲಿ ಸಿಗದಿರುವ ಬಗ್ಗೆ ದೂರುಗಳು ಸ್ವೀಕೃತವಾಗಿರುತ್ತದೆ. ಈ ಸಂಬಂಧ ವಿಕಲಚೇತನರಿಗೆ ತೊಂದರೆಯಾಗದಂತೆ ನಿಗದಿತ ಅವಧಿಯೊಳಗೆ ಮಾಶಾಸನವನ್ನು ತಲುಪಿಸುವಂತೆ ಕ್ರಮಕೈಗೊಳ್ಳಲು ನಿರ್ದೇಶಕರು, ಸಾಮಾಜಿಕ ಭದ್ರತೆ, ಪಿಂಚಣಿ ಇಲಾಖೆ ಇವರಿಗೆ ಅನೇಕ ಬಾರಿ ಪತ್ರಗಳನ್ನು ಬರೆಯಲಾಗಿರುತ್ತದೆ. ಜಿಲ್ಲೆಗಳಲ್ಲಿಯೂ ಸಹ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ವಿಕಲಚೇತನರಿಗೆ ತೊಂದರೆಯಾಗದಂತೆ ಯೋಜನೆಗಳ ಸೌಲಭ್ಯಗಳನ್ನು ನಿಗದಿತ ಅವಧಿಯೊಳಗೆ ತಲುಪಿಸಲು ಕ್ರಮಕೈಗೊಳ್ಳಲು ನಿರ್ದೇಶನವನ್ನು ಸಹ ನೀಡಲಾಗಿರುತ್ತದೆ.
ಆ)	ವಿಕಲಚೇತನರು ತಮಗಿರುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಸೌಲಭ್ಯದ ಕುರಿತು ಸರಿಯಾದ ಮಾಹಿತಿ ಇಲ್ಲದೇ, ಕಚೇರಿಯಿಂದ ಕಚೇರಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರದಿಂದ ಸೌಲಭ್ಯದ ಕುರಿತು ಸುಲಭ ರೀತಿಯಲ್ಲಿ ಮಾಹಿತಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	• ವಿಕಲಚೇತನರಿಗಾಗಿ ಇಲಾಖೆಯಿಂದ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳನ್ನು ಗ್ರಾಮೀಣ ಮಟ್ಟದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನ ಕಾರ್ಯಕರ್ತರ ಮೂಲಕವೇ ತಲುಪಿಸಲಾಗುವುದು.

		• ಇಲಾಖೆಯ ವೆಬ್‌ಸೈಟ್‌ನಲ್ಲಿ ಇಲಾಖೆಯ ಯೋಜನೆಗಳ ವಿವರಗಳನ್ನು ವಿಕಲಚೇತನರು ಪಡೆಯಬಹುದಾಗಿರುತ್ತದೆ. • ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ಮಾಹಿತಿ ಸಲಹಾ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಈ ಸಲಹಾ ಕೇಂದ್ರದ ಮೂಲಕ ವಿಕಲಚೇತನರ ಯೋಜನೆಗಳ ಮಾಹಿತಿಯನ್ನು ನೀಡುವುದಲ್ಲದೆ ಯೋಜನೆಗಳ ಪ್ರಯೋಜನ ಪಡೆಯಲು ಸಹ ಸಹಕರಿಸಲಾಗುವುದು. • ಪತ್ರಿಕಾ ಜಾಹಿರಾತು ಮೂಲಕ ಇಲಾಖಾ ಯೋಜನೆಗಳ ಮಾಹಿತಿಯನ್ನು ವಿಕಲಚೇತನರಿಗೆ ತಲುಪಿಸಲು ಕ್ರಮಕೈಗೊಳ್ಳಲಾಗಿದೆ. • ದೂರದರ್ಶನದ ಮೂಲಕ ಯೋಜನೆಗಳ ಮಾಹಿತಿಯನ್ನು ನೇರ ಸಂವಾದ ಕಾರ್ಯಕ್ರಮದಲ್ಲಿ ನೀಡಲಾಗಿದೆ. • ಹೊಂಬೆಳಕು ಎಂಬ ಯೋಜನೆಗಳ ಕೈಪಿಡಿಯನ್ನು ಮುದ್ರಿಸಿ ಎಲ್ಲಾ ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿರುತ್ತದೆ.
ಇ)	ವಿಕಲಚೇತನ ದೃಢೀಕರಣ ಪತ್ರ ನೀಡುವಲ್ಲಿ ಸಾಕಷ್ಟು ನ್ಯೂನ್ಯತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪಾರದರ್ಶಕವಾಗಿ ದೃಢೀಕರಣ ಪತ್ರ ನೀಡಿ ಬಡ ವಿಕಲಚೇತನರಿಗೆ ಸಹಕರಿಸುವಲ್ಲಿ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)	ಕೇಂದ್ರ ಸರ್ಕಾರದ ವಿಶಿಷ್ಟ ಗುರುತಿನ ಚೀಟಿ ಯೋಜನೆಯಡಿ ಯು.ಡಿ.ಐ.ಡಿ ಯಿಂದ 21 ವಿವಿಧ ಅಂಗವೈಕಲ್ಯವುಳ್ಳ ವಿಕಲಚೇತನರಿಗೆ ಗುರುತಿನ ಪ್ರಮಾಣ ಪತ್ರವನ್ನು ಆಯಾ ಜಿಲ್ಲೆಯ ತಾಲ್ಲೂಕು ಹಾಗೂ ಜಿಲ್ಲೆಯ ಜಿಲ್ಲಾಸ್ಪತ್ರೆಯ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ.

ಸಂಖ್ಯೆ: ಮಮಇ 236 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1990
ಮಾನ್ಯ ವಿಧಾನಸಭೆ ಸದಸ್ಯರ ಹೆಸರು : ಶ್ರೀಮತಿ ವಿನಿಶಾ ನಿರೋ
ಉತ್ತರಿಸಬೇಕಾದ ದಿನಾಂಕ : 30.09.2020
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕೋವಿಡ್–19 ಮಹಾಮಾರಿಯಿಂದ ಆರ್ಥಿಕವಾಗಿ ಹಾಗೂ ವೈದ್ಯಕೀಯವಾಗಿ ಬಾಧಿತರಾದ ವಿಕಲಚೇತನರು ಹಾಗೂ ಹಿರಿಯ ನಾಗರೀಕರಿಗಾಗಿ ಸರ್ಕಾರ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆಯೇ;	ಕೋವಿಡ್–19 ಮಹಾಮಾರಿಯಿಂದ ಆರ್ಥಿಕವಾಗಿ ಹಾಗೂ ವೈದ್ಯಕೀಯವಾಗಿ ಬಾಧಿತರಾದ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗಾಗಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಯೋಜನೆಗೆ ಹಂಚಿಕೆಯಾದ ಅನುದಾನ ಎಷ್ಟು;	ಅನ್ವಯಿಸುವುದಿಲ್ಲ.
ಇ)	ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಜೀವನೋಪಾಯಕ್ಕಾಗಿ ಕನಿಷ್ಠ ಮಾರ್ಚ್ 2021ರ ವರೆಗೆ ಸರ್ಕಾರ ವಿಶೇಷ ಪ್ಯಾಕೇಜನ್ನು ನೀಡಲಿದೆಯೇ;	ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಜೀವನೋಪಾಯಕ್ಕಾಗಿ ಮಾರ್ಚ್ 2021ರವರೆಗೆ ಸರ್ಕಾರ ಯಾವುದೇ ವಿಶೇಷ ಪ್ಯಾಕೇಜ್‌ನ್ನು ನೀಡುವ ಯೋಜನೆ ಸಧ್ಯಕ್ಕೆ ಇರುವುದಿಲ್ಲ.
ಈ)	ದುರ್ಬಲ ವರ್ಗಗಳಿಗೆ ನೆರವು ನೀಡುವ ವಿಧಾನಗಳನ್ನು ತಿಳಿಸಿ;	ಅನ್ವಯಿಸುವುದಿಲ್ಲ.
ಉ)	ವಿಕಲಚೇತನ ಹಾಗೂ ಹಿರಿಯ ನಾಗರೀಕರಿಗೆ ಸರ್ಕಾರಿ ಕಚೇರಿಗಳಲ್ಲಿ ಪ್ರವೇಶಾವಕಾಶದ ವ್ಯವಸ್ಥೆ ಕಲ್ಪಸಲಾಗಿದೆಯೇ; ಕಲ್ಪಿಸದಿದ್ದರೆ, ಪ್ರವೇಶಾವಕಾಶದ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ತೆಗೆದುಕೊಳ್ಳುತ್ತಿರುವ ಕ್ರಮಗಳಾವುವು?	ವಿಕಲಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಹಾಗೂ ಸ್ಯಾನಿಟೈಸರ್ ಬಳಸಿ ಸರ್ಕಾರಿ ಕಛೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮುಖಾಂತರ ಹಾಗೂ ಆಯುಕ್ತರು, ಅಂಗವಿಕಲರ ಅಧಿನಿಯಮ ಕಛೇರಿ ಇವರ ಮುಖಾಂತರ ಸಾಕಷ್ಟು ಪ್ರಚಾರ ನೀಡಲಾಗಿದೆ.

ಸಂಖ್ಯೆ: ಮಮಇ 235 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 235 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:02.11.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀಮತಿ ವಿನಿಶಾ ನಿರೋ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1990ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನ ಸಭೆ ಸಚಿವಾಲಯದ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/7ಅ/ಪ್ರ.ಸಂ/1990/2020, ದಿ:22.09.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ವಿನಿಶಾ ನಿರೋ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1990ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

G.H. Saroja
(ಜಿ.ಹೆಚ್.ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2816

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 259 ಎಸ್‌ಜಿಡಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ: 28.10.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ಸಭಾ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಲಿಂಗೇಗೌಡ.ಕೆ.ಎಂ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2012ಕ್ಕೆ ಉತ್ತರಿಸುವ ಕುರಿತು.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಲಿಂಗೇಗೌಡ.ಕೆ.ಎಂ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2012ಕ್ಕೆ ಉತ್ತರವನ್ನು 25 ಪ್ರತಿಗಳಲ್ಲಿ ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಜಿ.ಹೆಚ್. ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

Received
29/10/2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2012
ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ.ಕೆ.ಎಂ
ಉತ್ತರಿಸುವ ದಿನಾಂಕ : 30.09.2020
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅಂಗನವಾಡಿ ಮೇಲ್ವಿಚಾರಕಿಯರನ್ನು ನೇಮಕಾತಿ ಮಾಡಲಾಗಿದ್ದು, ಹಾಸನ ಜಿಲ್ಲೆಯಲ್ಲಿ ಶೇಕಡಾ ೮೦ರಷ್ಟು ಮೇಲ್ವಿಚಾರಕಿಯರನ್ನು ಉತ್ತರ ಕರ್ನಾಟಕದ ಭಾಗದವರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ಜಿಲ್ಲೆಯಲ್ಲಿ ಒಟ್ಟು 76 ಮಹಿಳಾ ಮೇಲ್ವಿಚಾರಕಿಯರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 49 ಹುದ್ದೆಗಳು ಭರ್ತಿಯಾಗಿದ್ದು, 27 ಹುದ್ದೆಗಳು ಮಾತ್ರ ಖಾಲಿ ಇರುತ್ತವೆ. ಭರ್ತಿಯಾಗಿರುವ ಹುದ್ದೆಗಳಲ್ಲಿ 08 ಮೇಲ್ವಿಚಾರಕಿಯರು ಮಾತ್ರ ಉತ್ತರ ಕರ್ನಾಟಕದ ಭಾಗದವರಾಗಿರುತ್ತಾರೆ.
ಆ)	ಪ್ರಸ್ತುತ ಸಾಲಿನಲ್ಲಿ ಇವರುಗಳನ್ನು ಕೌನ್ಸಿಲಿಂಗ್ ಮೂಲಕ ಸ್ವಂತ ಜಿಲ್ಲೆಗೆ ವರ್ಗಾವಣೆ ಮಾಡಲಾಗುತ್ತಿದ್ದು, ಇದರಿಂದಾಗಿ ಹಾಸನ ಜಿಲ್ಲೆಯಲ್ಲಿ ಅಂಗನವಾಡಿ ಮೇಲ್ವಿಚಾರಕಿಯರ ಕೊರತೆ ಉಂಟಾಗಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಮೇಲ್ವಿಚಾರಕಿಯರನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ಮೇಲ್ವಿಚಾರಕಿಯರ ಹುದ್ದೆಗಳು ಹೆಚ್ಚುವರಿ ಪ್ರಭಾರ ವಹಿಸುವ ಮೂಲಕ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.

ಸಂ. ಮಮಇ 259 ಎಸ್‌ಜಿಡಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಗ್ರಾಅಪಂ/111/ಯೋಉಮಾ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:29-10-2020

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ರಹೀಂಖಾನ್ (ಬೀದರ್) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 2005 ಕ್ಕೆ ಉತ್ತರಿಸುವ ಕುರಿತು.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/ 15ನೇವಿಸ/ 7ಅ/ ಪ್ರ.ಸಂ.2005/2020 ದಿ:22.09.2020

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ರಹೀಂಖಾನ್ (ಬೀದರ್) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 2005 ಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕೋರಲಾದ ಮಾಹಿತಿಯ ಉತ್ತರದ 5 ಪ್ರತಿಗಳನ್ನು ಸಲ್ಲಿಸಿದೆ ಹಾಗೂ ಮಾಹಿತಿಯನ್ನು ಇ-ಮೇಲ್ ಮೂಲಕ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

29/x
ನಿರ್ದೇಶಕರು,
ಯೋಜನೆ ಉಸ್ತುವಾರಿ ಮತ್ತು ಮಾಹಿತಿ ವಿಭಾಗ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

D/PMI20/COM5/DD/LAQ2020-21/ LAQ 2005 Covering letter 111

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರಹೀಂ ಖಾನ್ (ಬೀದರ್)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2005
ಉತ್ತರಿಸಬೇಕಾದ ದಿನಾಂಕ : 30-09-2020
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ	ಪ್ರಶ್ನೆ	ಇಲಾಖೆಯ ಮಾಹಿತಿ
ಅ	ಕಳೆದ ಮೂರು ವರ್ಷಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಗಳ ಯೋಜನೆಗಳ ಅಡಿಯಲ್ಲಿ ಮಂಜೂರಾದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು (ಯೋಜನೆವಾರು, ಲೆಕ್ಕಶೀರ್ಷಿಕೆಗಳವಾರು, ವರ್ಷವಾರು, ವಿಧಾನಸಭಾ ಕ್ಷೇತ್ರವಾರು. ಅನುದಾನ ವಿವರ ನೀಡುವುದು) ;	ಕಳೆದ ಮೂರು ವರ್ಷಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳಿಗೆ ಮಂಜೂರಾದ, ಬಿಡುಗಡೆಯಾದ ಹಾಗೂ ಅನುದಾನದ ವಿವರವನ್ನು ವಿಧಾನಸಭಾ ಕ್ಷೇತ್ರವಾರು **ಅನುಬಂಧ-1 ರಿಂದ 3ರಲ್ಲಿ** ಒದಗಿಸಿದೆ.
ಆ	ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಎಸ್.ಸಿ.ಪಿ / ಟಿ.ಎಸ್.ಪಿ ಅಡಿಯಲ್ಲಿ ನೀಡಿರುವ ಅನುದಾನವೆಷ್ಟು (ಇಲಾಖಾ ವತಿಯಿಂದ ಕೈ ಗೊಂಡ ಕಾಮಗಾರಿಗಳ ವಿವರವನ್ನು ವಿವಿಧ ಲೆಕ್ಕ ಶೀರ್ಷಿಕೆವಾರು ಹಾಗೂ ವರ್ಷವಾರು ವಿವರ ನೀಡುವುದು) ;	ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಎಸ್.ಸಿ.ಪಿ / ಟಿ.ಎಸ್.ಪಿ ಯೋಜನೆಯಡಿಯಲ್ಲಿ ನೀಡಿರುವ ಅನುದಾನ ಹಾಗೂ ಕಾಮಗಾರಿಗಳ ವಿವರವನ್ನು ವರ್ಷವಾರು **ಅನುಬಂಧ-4 ರಿಂದ 6 ರಲ್ಲಿ** ಒದಗಿಸಿದೆ.
ಇ	ರಾಜ್ಯದಲ್ಲಿನ ಜನರು ಶುದ್ಧ ಕುಡಿಯುವ ನೀರಿನ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರಕದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಈ ಕೊರತೆ ನೀಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು (ಕ್ಷೇತ್ರವಾರು ವಿವರ ನೀಡುವುದು)	ರಾಜ್ಯದಲ್ಲಿ ಜನರು ಶುದ್ಧ ಕುಡಿಯುವ ನೀರಿನ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ರಾಜ್ಯದಲ್ಲಿರುವ ಎಲ್ಲಾ ಗ್ರಾಮೀಣ ಜನವಸತಿಗಳಲ್ಲಿನ ಮನೆಗಳಿಗೆ 2023ನೇ ಸಾಲಿನ ಒಳಗೆ ಜೆ.ಜೆ.ಎಂ (ಜಲ ಜೀವನ್ ಮಿಷನ್) ಯೋಜನೆಯಡಿಯಲ್ಲಿ ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಶುದ್ಧ ಕುಡಿಯುವ ನೀರು ಒದಗಿಸಲು ಉದ್ದೇಶಿಸಲಾಗಿದೆ.

ಪು.ತಿ.ನೋ.

ಈ	ಗ್ರಾಮ ವಿಕಾಸ ಯೋಜನೆಯನ್ನು ಮುಂದುವರೆಸುವ ಉದ್ದೇಶ ಸರ್ಕಾರಕ್ಕಿದೆಯೇ: ಹಾಗಿದ್ದಲ್ಲಿ ಈಗಿರುವ ಅನುದಾನವನ್ನು ಹೆಚ್ಚಿಸಲು ಸಾಧ್ಯವಿದೆಯೇ :	2014-15 ನೇ ಸಾಲಿನಿಂದ ಪ್ರಾರಂಭವಾದ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ತಲಾ ರೂ.75.00 ಲಕ್ಷದಂತೆ ಸುಮಾರು 939 ಗ್ರಾಮಗಳನ್ನು ಆಯ್ಕೆಮಾಡಿ ರೂ.75502.00 ಲಕ್ಷಗಳನ್ನು ಹಂಚಿಕೆ ಮಾಡಿ ಅನುದಾವನ್ನು ಸಂಪೂರ್ಣ ಬಿಡುಗಡೆ ಮಾಡಲಾಗಿದೆ. ಯೋಜನೆಯು ಸಹಾ 2018-19 ನೇ ಸಾಲಿನಲ್ಲಿ ಪೂರ್ಣಗೊಂಡಿದೆ. ಗ್ರಾಮ ವಿಕಾಸ ಯೋಜನೆಯಡಿ ನಿಗಧಿಪಡಿಸಿದ್ದ ಅನುದಾನದಿಂದ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಸಂಪೂರ್ಣವಾಗಿ ಅಬಿವೃದ್ಧಿಪಡಿಸಲು ಸಾಕಾಗುತ್ತಿಲ್ಲ ಎಂಬ ಅಂಶವನ್ನುಮನಗಂಡು ಹೊಸದಾಗಿ 2017-18 ನೇ ಸಾಲಿನಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯನ್ನು ಜಾರಿಗೊಳಿಸಿ ಪ್ರತಿ ಗ್ರಾಮಕ್ಕೆ ರೂ.1.00 ಕೋಟಿಯಂತೆ ಸುಮಾರು 991 ಗ್ರಾಮಗಳನ್ನು ಆಯ್ಕೆ ಮಾಡಿ ರೂ.1000.00ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಪ್ರಸ್ತುತ ಯೋಜನೆಯು ಚಾಲ್ತಿಯಲ್ಲಿದೆ.
ಉ	ಇದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?	ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯು ಪ್ರಸ್ತುತ ಚಾಲ್ತಿಯಲ್ಲಿರುವ ಕಾರಣ ಗ್ರಾಮ ವಿಕಾಸ ಯೋಜನೆಯನ್ನು ಮತ್ತೊಮ್ಮೆ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ಗ್ರಾಅಪ 111 ಯೋಉಮಾ 2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಸಭೆ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 2005

ಅನುಬಂಧ-1

2017-18ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಗ್ರಾಅಪಂ.ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಮಂಜೂರಾದ ಮತ್ತು ಬಿಡುಗಡೆ ಮಾಡಿದ ವಿಧಾನಸಭಾ ಕ್ಷೇತ್ರವಾರು ಅನುದಾನದ ವಿವರ.

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೋಜನೆ	ವಿಧಾನಸಭಾ ಕ್ಷೇತ್ರ									
		ಔರಾದ್		ಬಸವಕಲ್ಯಾಣ		ಭಾಲ್ಕಿ		ಬೀದರ್		ಹುಮ್ನಾಬಾದ್	
		ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	1728.19	1148.77	1796.49	1274.37	1321.99	1130.32	1470.33	888.17	1307.82	867.00
2	ಸ್ವಚ್ಛ ಭಾರತ ಅಭಿಯಾನ	1191.80	1191.80	1982.99	1982.99	1115.09	1115.09	772.26	772.26	989.37	989.37
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	1191.67	1803.00	836.55	1722.00	949.70	1781.00	646.25	135.00	1022.51	1671.07
4	ಸಿ.ಎಂ.ಜಿ.ಎಸ್.ವೈ	95.91	95.91	57.93	57.93	56.48	56.48	84.69	84.69	54.99	54.99
5	ಪಿ.ಎಂ.ಜಿ.ಎಸ್.ವೈ ರಸ್ತೆಗಳ ನಿರ್ವಹಣೆ	6.86	–	5.04	–	5.51	–	8.28	–	7.72	–
6	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ-ಟಿ.ಎಸ್.ಪಿ ಒಳಗೊಂಡಂತೆ)	500.31	452.99	424.04	246.9	466.71	451.19	–	–	366.56	316.05
7	ಆರ್.ಐ.ಡಿ.ಎಫ್ ನಬಾರ್ಡ್	208.00	27.85	100.00	32.48	525.00	127.11	255.00	56.60	525.00	127.11
8	ಸುವರ್ಣ ಗ್ರಾಮೋದಯ/ **ಗ್ರಾಮ ವಿಕಾಸ**/ ಮುಖ್ಯ ಮಂತ್ರಿ ಗ್ರಾಮ ವಿಕಾಸ	342.49	157.00	0.00	0.00	0.00	0.00	0.00	0.00	0.00	0.00
9	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	50.00	0.15	140.00	24.96	50.00	35.14	90.00	0.10	145.60	0.20
10	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	66.00	66.00	77.00	77.00	71.00	71.00	98.00	98.00	103.00	103.00

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2005

ಅನುಬಂಧ-2

2018-19ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಗ್ರಾಅಪಂ.ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಮಂಜೂರಾದ ಮತ್ತು ಬಿಡುಗಡೆ ಮಾಡಿದ ವಿಧಾನಸಭಾ ಕ್ಷೇತ್ರವಾರು ಅನುದಾನದ ವಿವರ.

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೋಜನೆ	ವಿಧಾನಸಭಾ ಕ್ಷೇತ್ರ									
		ಔರಾದ್		ಬಸವಕಲ್ಯಾಣ		ಭಾಲ್ಕಿ		ಬೀದರ್		ಹುಮ್ನಾಬಾದ್	
		ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	1617.61	1128.75	2057.79	2500.44	2072.27	1509.17	1201.24	1109.13	1332.32	952.33
2	ಸ್ವಚ್ಛ ಭಾರತ ಅಭಿಯಾನ	2897.67	2897.67	1885.55	1885.55	2694.37	2694.37	2768.72	2768.72	2320.99	2320.99
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	1212.00	1541.97	1477.88	1630.12	904.58	1253.36	389.90	1312.61	1167.12	1609.41
4	ಸಿ.ಎಂ.ಜಿ.ಎಸ್.ವೈ	72.05	72.05	61.77	61.77	67.05	67.05	77.06	77.06	72.05	72.05
5	ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ	9.52	–	6.25	–	7.75	–	10.27	–	10.65	–
6	ಆರ್.ಐ.ಡಿ.ಎಫ್ ನಬಾರ್ಡ್	108.00	47.71	90.00	49.57	275.00	24.57	215.00	187.54	370.60	228.30
7	ಸುವರ್ಣ ಗ್ರಾಮೋದಯ/ **ಗ್ರಾಮ ವಿಕಾಸ**/ ಮುಖ್ಯ ಮಂತ್ರಿ ಗ್ರಾಮ ವಿಕಾಸ	0.00	17.22	0.00	0.00	0.00	0.00	0.00	0.00	0.00	0.00
8	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	50.00	45.40	140.00	49.47	50.00	0.00	90.00	17.90	145.60	117.23
9	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	66.00	66.00	77.00	77.00	71.00	71.00	98.00	98.00	103.00	103.00

ವಿಧಾನ ಸಭೆ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 2005

ಅನುಬಂಧ-3

2019-20ನೇ ಸಾಲಿನಲ್ಲಿ, ಬೀದರ್ ಜಿಲ್ಲೆಯಲ್ಲಿ, ಗ್ರಾ.ಅ.ಪಂ.ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಮಂಜೂರಾದ ಮತ್ತು ಬಿಡುಗಡೆ ಮಾಡಿದ ವಿಧಾನಸಭಾ ಕ್ಷೇತ್ರವಾರು ಅನುದಾನದ ವಿವರ.

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೋಜನೆ	ವಿಧಾನಸಭಾ ಕ್ಷೇತ್ರ									
		ಔರಾದ್		ಬಸವಕಲ್ಯಾಣ		ಭಾಲ್ಕಿ		ಬೀದರ್		ಹುಮ್ನಾಬಾದ್	
		ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರಾದ ಅನುದಾನ	ಬಿಡುಗಡೆ ಮಾಡಿದ ಅನುದಾನ
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	2673.08	1527.41	4401.99	4529.54	3356.48	2657.35	2598.23	1766.09	2371.11	1634.37
2	ಸ್ವಚ್ಛ ಭಾರತ ಅಭಿಯಾನ	412.50	312.50	405.50	305.50	420.18	320.18	382.50	282.50	267.50	167.50
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)	1990.38	1064.03	1847.05	1043.75	1365.96	905.85	594.16	908.66	1344.6	1138.1
4	ಸಿ.ಎಂ.ಜಿ.ಎಸ್.ವೈ	70.00	70.00	80.00	80.00	60.00	60.00	70.00	70.00	70.00	70.00
5	ಪಿ.ಎಂ.ಜಿ.ಎಸ್.ವೈ	12.16	5.39	7.53	11.74	9.97	--	12.39	14.09	13.47	16.27
6	ಆರ್.ಐ.ಡಿ.ಎಫ್ ನಬಾರ್ಡ್	0.00	0.00	0.00	0.00	263.00	156.00	0.00	0.00	100.00	59.00
7	ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯ ಮಂತ್ರಿ ಗ್ರಾಮ ವಿಕಾಸ	600.00	230.36	-	-	-	-	-	-	-	-
8	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	50.00	4.28	140.00	25.19	50.00	9.76	90.00	20.18	145.60	20.59
9	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	118.26	118.26	118.26	118.26	101.37	101.37	118.29	118.29	118.26	118.26

ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2005

ಅನುಬಂಧ-4

ಬೀದರ್ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಿದ SCP-TSP ಯೋಜನೆಯಡಿ ನೀಡಲಾದ ಅನುದಾನ ಹಾಗೂ ಕೈಗೊಂಡ ಕಾಮಗಾರಿಗಳ ವಿವರ.

ವರ್ಷ:2017-18 (ರೂ.ಲಕ್ಷಗಳಲ್ಲಿ)

ವಿಶೇಷ ಘಟಕ ಯೋಜನೆ (SCP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	706.84	800.08	PWS, MWS & WPP	127	127	0	0
2	ನಮ್ಮ ಗ್ರಾಮ ನಮ್ಮ ರಸ್ತೆ	3009.22	2210.44	ರಸ್ತೆ/ಸೇತುವೆ	9.00	6.00	3.00	-
3	ಎಂ.ಜಿ.ಎನ್.ಆರ್.ಇ.ಜಿ.ಎ	368.59	368.5948	ಫಲಾನುಭವಿಗಳ ಜಮೀನುಗಳಲ್ಲಿ ತೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	3690	3480	210	0

ಗಿರಿಜನ ಉಪ ಯೋಜನೆ (TSP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	449.39	500.58	PWS, MWS & WPP	59	59	0	0
2	ನಮ್ಮ ಗ್ರಾಮ ನಮ್ಮ ರಸ್ತೆ	1472.67	1100.51	ರಸ್ತೆ/ಸೇತುವೆ	10.00	7.00	3.00	–
3	ಎಂ.ಜಿ.ಎನ್.ಆರ್.ಇ.ಜಿ.ಎ	222.94	222.94	ಫಲಾನುಭವಿಗಳ ಜಮೀನುಗಳಲ್ಲಿ ತೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	2227	2073	154	0
4	ಸ್ವಚ್ಛ ಭಾರತ ಅಭಿಯಾನ	1550.50	1550.50	ವೈಯಕ್ತಿಕ ಗೃಹ ಶೌಚಾಲಯ	9920	9920	0	0

ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2005

ಅನುಬಂಧ- 5

ಬೀದರ್ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಿದ SCP-TSP ಯೋಜನೆಯಡಿ ನೀಡಲಾದ ಅನುದಾನ ಹಾಗೂ ಕೈಗೊಂಡ ಕಾಮಗಾರಿಗಳ ವಿವರ.

ವರ್ಷ:2018-19

(ರೂ.ಲಕ್ಷಗಳಲ್ಲಿ)

ವಿಶೇಷ ಘಟಕ ಯೋಜನೆ (SCP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	805.84	900.02	PWS, MWS & WPP	97	97	0	0
2	ಎಂ.ಜಿ.ಎನ್.ಆರ್.ಇ.ಜಿ.ಎ	ಎಂ.ಜಿ.ಎನ್.ಆರ್.ಇ.ಜಿ.ಎ	244.59	244.59	ಫಲಾನುಭವಿಗಳ ಜಮೀನುಗಳಲ್ಲಿ ಕೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	4666	3807	859

ಗಿರಿಜನ ಉಪ ಯೋಜನೆ (TSP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	442.64	500.79	PWS, MWS & WPP	38	38	0	0
2	ಎಂ.ಜಿ.ಎನ್.ಆರ್.ಇ.ಜಿ.ಎ	157.49	157.49	ಫಲಾನುಭವಿಗಳ ಜಮೀನುಗಳಲ್ಲಿ ಕೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	2546	2112	434	0
3	ಸ್ವಚ್ಛ ಭಾರತ ಅಭಿಯಾನ	2826.41	2826.41	ವೈಯಕ್ತಿಕ ಗೃಹ ಶೌಚಾಲಯ	18675	18675	0	0

ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2005

ಅನುಬಂಧ- 6

ಬೀದರ್ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಿದ SCP-TSP ಯೋಜನೆಯಡಿ ನೀಡಲಾದ ಅನುದಾನ ಹಾಗೂ ಕೈಗೊಂಡ ಕಾಮಗಾರಿಗಳ ವಿವರ.

ವರ್ಷ:2019-20 (ರೂ.ಲಕ್ಷಗಳಲ್ಲಿ)

ವಿಶೇಷ ಘಟಕ ಯೋಜನೆ (SCP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	1881.52	100.90	PWS, MWS & WPP	22	18	4	0
5	ಎಂ.ಜಿ.ಎನ್.ಆರ್.ಇ.ಜಿ.ಎ	300.85	300.85	ಫಲಾನುಭವಿಗಳ ಜಮೀನುಗಳಲ್ಲಿ ತೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರೆ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	4940	1648	3292	0

ಗಿರಿಜನ ಉಪ ಯೋಜನೆ (TSP)

ಕ್ರ. ಸಂ.	ಯೋಜನೆ	ಮಂಜೂರಾದ ಅನುದಾನ	ವೆಚ್ಚ	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸ್ವರೂಪ	ಕಾಮಗಾರಿಗಳ ಸಂಖ್ಯೆ			
					ಕೈಗೊಂಡ	ಪೂರ್ಣಗೊಂಡ	ಅಪೂರ್ಣ	ಪ್ರಾರಂಭಿಸಬೇಕಾಗಿರುವ
1	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ	325.17	100.76	PWS, MWS & WPP	11	11	0	0
2	ಎಂ.ಜಿ.ಎನ್.ಆರ್.ಇ.ಜಿ.ಎ	181.04	181.04	ಫಲಾನುಭವಿಗಳ ಜಮೀನುಗಳಲ್ಲಿ ತೆರೆದ ಬಾವಿ ನಿರ್ಮಾಣ, ದನದಕೊಟ್ಟಿಗೆ ನಿರ್ಮಾಣ, ಅರಣ್ಯ ಗಿಡ ನೆಡುವಿಕೆ,ತೋಟಗಾರಿಕೆ ಅಭಿವೃದ್ಧಿ,ಇತರೆ ವೈಯಕ್ತಿಕ ಕಾಮಗಾರಿಗಳು,ವೈಯಕ್ತಿಕ ಜಮೀನು ಅಭಿವೃದ್ಧಿ ಕಾರ್ಯಕ್ರಮ	2471	1008	1463	0
3	ಸ್ವಚ್ಛ ಭಾರತ ಅಭಿಯಾನ	167.25	167.25	ವೈಯಕ್ತಿಕ ಗೃಹ ಶೌಚಾಲಯ	1121	1121	0	0

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 260 ಸಲೆವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:03.11.2020

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ **ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1936 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ **ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1936 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

Recd
03/11/2020.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1936

ಉತ್ತರಿಸಬೇಕಾದ ದಿನಾಂಕ : 30.09.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	2019-20ನೇ ಸಾಲಿನಲ್ಲಿ ಪಶು ಇಲಾಖೆಯಿಂದ ಬಡವರ್ಗದವರಿಗೆ ಪಶುಭಾಗ್ಯ ಯೋಜನೆಯಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ಹಸು ಮತ್ತು ಕುರಿಗಳ ಸಂಖ್ಯೆಯನ್ನು ಕಡಿತಗೊಳಿಸಿ ಒಂದು ಹಸು ಮತ್ತು ಒಂದು ಕುರಿಗೆ ಮಾತ್ರ ಸೀಮಿತಗೊಳಿಸಿರುವುದರಿಂದ ಹೈನುಗಾರಿಕೆಯನ್ನು ನಂಬಿ ಜೀವನ ನಡೆಸುತ್ತಿದ್ದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು; ಹಾಗೂ ಹಸು ಮತ್ತು ಕುರಿ ವಿತರಣೆಯನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	2019-20ನೇ ಸಾಲಿನಲ್ಲಿ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ಪಶುಭಾಗ್ಯ ಯೋಜನೆಯಡಿಯಲ್ಲಿ 2 ಮಿಶ್ರತಳಿ ಹಸು ಘಟಕ ವಿತರಣೆಯ ಬದಲಾಗಿ ಒಂದು ಹಸು ಘಟಕಕ್ಕೆ ಸೀಮಿತಗೊಳಿಸಲಾಗಿರುತ್ತದೆ ಆದರೆ, 3 ಕುರಿ / 3 ಮೇಕೆ ಘಟಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ಮುಂದುವರೆಸಲಾಗಿರುತ್ತದೆ. 2019-20ನೇ ಸಾಲಿನ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಆದೇಶ ಸಂಖ್ಯೆ: ಪಸಂಮೀ 29 ಪಪಾಯೋ 2019, ದಿನಾಂಕ:23.07.2019 ರ ಅನುಮೋದಿತ ಮಾರ್ಗಸೂಚಿಯನ್ವಯ 1 ಮಿಶ್ರತಳಿ ಹಸು ಅಥವಾ ಸುಧಾರಿತ ಎಮ್ಮೆ ಘಟಕಗಳನ್ನು ವಿತರಿಸಲಾಗಿದೆ. (ಮಾರ್ಗಸೂಚಿಯ ಪ್ರತಿಯನ್ನು ಲಗತ್ತಿಸಿದೆ.) 2020-21ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಕ್ಕೆ ಅನುದಾನ ನಿಗಧಿಯಾಗಿರುವುದಿಲ್ಲ.

ಪಸಂಮೀ ಇ-260 ಸಲೆವಿ 2020

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20 ನೇ ಸಾಲಿನ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಆಪಸಂ/ಯೋಜನೆ-3/ವಿವ-8/2019-20.

***

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕ ಕಡತದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2019-20 ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗಾಗಿ ಆಯವ್ಯಯದಲ್ಲಿ "ಲೆಕ್ಕಶೀರ್ಷಿಕೆ:2403-00-001-0-04" ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತ ಉಪಶೀರ್ಷಿಕೆ 422 ವಿಶೇಷ ಘಟಕ ಯೋಜನೆಯಡಿ ರೂ. 745.59 ಲಕ್ಷಗಳು ಮತ್ತು ಉಪಶೀರ್ಷಿಕೆ 423 ಗಿರಿಜನ ಉಪಯೋಜನೆಯಡಿ ರೂ. 61.34 ಲಕ್ಷಗಳನ್ನು ಹಾಗೂ "ಲೆಕ್ಕಶೀರ್ಷಿಕೆ: 2404-00-191-1-16 ಮಹಿಳೆಯರಿಗಾಗಿ ಪಶುಸಂಗೋಪನಾ ಕಾರ್ಯಕ್ರಮ" ಇದರಡಿ ಉಪಶೀರ್ಷಿಕೆ 422 ವಿಶೇಷ ಘಟಕ ಯೋಜನೆಯಡಿ ರೂ. 271.00 ಲಕ್ಷಗಳು ಮತ್ತು ಉಪಶೀರ್ಷಿಕೆ:423 ಗಿರಿಜನ ಉಪಯೋಜನೆಯಡಿ ರೂ. 136.00 ಲಕ್ಷಗಳು ಹಾಗೂ ಉಪಶೀರ್ಷಿಕೆ 059 ಸಾಮಾನ್ಯರಡಿಯಲ್ಲಿ ರೂ. 493.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಲಾಗಿದೆ.

ಮುಂದುವರೆದು, ಪ್ರಸ್ತುತ ಸಾಲಿನಲ್ಲಿ ಇ-ಆಡಳಿತ ಇಲಾಖೆಯಿಂದ FRUITS-ID ಯನ್ನು ಬಳಸಿಕೊಂಡು ಪಶುಭಾಗ್ಯ ತಂತ್ರಾಂಶ ಹಾಗೂ ಅನುಕೂಲತೆಗಳ ಬಗ್ಗೆ ಒಳಗೊಂಡಿರುವ ಮಾರ್ಗಸೂಚಿಗಳನ್ನು ತಯಾರಿಸಬಹುದಾಗಿದ್ದು, ಅದರಂತೆ ಕಾರ್ಯಕ್ರಮವನ್ನು ಅನುಷ್ಠಾಗೊಳಿಸಲು ಮಾರ್ಗಸೂಚಿಗಳನ್ನು ತಯಾರಿಸಿ ಅನುಮೋದನೆ ನೀಡುವಂತೆ ಏಕ ಕಡತದಲ್ಲಿ ಕೋರಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು 2019-20 ನೇ ಸಾಲಿನ ಪಶುಭಾಗ್ಯ ತಂತ್ರಾಂಶದಿಂದ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 29 ಪಪಾಯೋ 2019
ಬೆಂಗಳೂರು ದಿನಾಂಕ: 23.07.2019.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20 ನೇ ಸಾಲಿನ ಪಶುಭಾಗ್ಯ ತಂತ್ರಾಂಶದಿಂದ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳಿಗೆ ಈ ಆದೇಶಕ್ಕೆ ಲಗತ್ತಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರು ಅನುಷ್ಠಾನಾಧಿಕಾರಿಯಾಗಿದ್ದು, ನಿರ್ದೇಶಕರು, ಪಶುಪಾಲನಾ

-2-

ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ತಾಂತ್ರಿಕ ಸಂಯೋಗವನ್ನು ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಹನುಮಂತೇಗೌಡ) 23/07/20
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ& ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿವಿ ಗೋಪುರ ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
6. ಉಪನಿರ್ದೇಶಕರು, ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
7. ಸಂಬಂಧಪಟ್ಟ ಅಧಿಕಾರಿಗಳಿಗೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಮುಖಾಂತರ).
8. ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
10. ಸರ್ಕಾರದ ಕಾರ್ಯದರ್ಶಿಯವರ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
11. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 29 ಪಪಾಯೋ 2019,
ದಿನಾಂಕ: 23.07.2019 ಕ್ಕೆ ಅನುಬಂಧ

<u>2019-20 ನೇ ಸಾಲಿನ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಗಳು</u>

1. "ಪಶುಭಾಗ್ಯ" ತಂತ್ರಾಂಶ

ಪಶುಪಾಲನೆ ಮತ್ತು ಪಶುವೈದ್ಯಸೇವಾ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಎಲ್ಲಾ ರೀತಿಯ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು "ಪಶುಭಾಗ್ಯ" ತಂತ್ರಾಂಶವನ್ನು ಬಳಸಲಾಗುತ್ತಿದೆ. ಈ ಸಾಲಿನಿಂದ ಈ ರೀತಿಯ ಎಲ್ಲಾ ಯೋಜನೆಗಳ ಫಲಾನುಭವಿಗಳ ಆಯ್ಕೆ, ಅನುಷ್ಠಾನ ಮತ್ತು ಅನುಪಾಲನೆಗಳನ್ನು ಈ ತಂತ್ರಾಂಶವನ್ನು ಬಳಸಿಕೊಂಡೇ ಮಾಡಬೇಕು. ಈ ತಂತ್ರಾಂಶದ ಬಳಕೆಯಿಂದ ಫಲಾನುಭವಿಗಳಿಗೆ ಮತ್ತು ಇಲಾಖೆಗೆ ಕೆಳಕಾಣಿಸಿದ ಅನುಕೂಲಗಳು ಆಗಲಿದೆ.

ಫಲಾನುಭವಿ ಆಧಾರಿತ ಎಲ್ಲಾ ಯೋಜನೆಗಳ ಫಲಾನುಭವಿಗಳಿಗೆ FRUITS ID ಇರುವುದು ಕಡ್ಡಾಯವೆಂದು ಇ ಆಡಳಿತ ಇಲಾಖೆಯಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಅ) ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು

1) ಒಂದು ಬಾರಿ ಇಲಾಖೆಯ ಯೋಜನೆಗಳಿಗೆ ಈ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿದ್ದಲ್ಲಿ ಪ್ರತಿ ವರ್ಷ ಸಲ್ಲಿಸುವ ಅಗತ್ಯ ಇರುವುದಿಲ್ಲ.
2) ಫಲಾನುಭವಿಯು ಸ್ವತಃ ತಾನೇ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಇಲಾಖೆಯ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿ FRUITS ID (ಗುರುತಿನ ಸಂಖ್ಯೆ) ಪಡೆಯಬಹುದು. ಒಮ್ಮೆ ಈ ರೀತಿ ಪಡೆದ ಗುರುತಿನ ಸಂಖ್ಯೆಯು, ಶಾಶ್ವತ ಗುರುತಿನ ಸಂಖ್ಯೆಯಾಗಲಿದ್ದು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯು ಸೇರಿದಂತೆ ಈ ಎಲ್ಲಾ ಇಲಾಖೆಗಳ ಸೌಲಭ್ಯ, ಸವಲತ್ತು ಪಡೆಯಲು ಬಳಸಬಹುದು.
3) FRUITS ID (ಗುರುತಿನ ಸಂಖ್ಯೆ) ಪಡೆದ ನಂತರ ಫಲಾನುಭವಿಗಳಿಗೆ ಸಂಬಂಧಿಸಿದ ಜಾತಿ ಪತ್ರ, ಜಮೀನು ಮಾಹಿತಿ, ಬಡತನ ರೇಖೆಗಿಂತ ಕೆಳಗಿರುವ ಬಗ್ಗೆ ದೃಢೀಕರಣ, ಫೋಟೊ ಮುಂತಾದ ದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ.
4) ಫಲಾನುಭವಿಯು ಸ್ವತಃ ತಾನೆ ಅಥವಾ ಇಲಾಖೆಗೆ ಮಾಹಿತಿ ನೀಡಿ "ಪಶುಭಾಗ್ಯ" ತಂತ್ರಾಂಶದಲ್ಲಿ ಅರ್ಜಿಯನ್ನು, ಇಲಾಖೆಯಲ್ಲಿನ ಸವಲತ್ತುಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬಹುದು.
5) ಫಲಾನುಭವಿಯ ಅಗತ್ಯ ಮತ್ತು ಅರ್ಹತೆಗೆ ತಕ್ಕಂತೆ ವಿವಿಧ ಯೋಜನೆ ಹಾಗೂ ಘಟಕಗಳಿಗೆ ಬೇಡಿಕೆಯನ್ನು ಒಂದೇ ಬಾರಿಗೆ ನೀಡಬಹುದು, ತದನಂತರ ಯಾವಾಗಲಾದರೂ ಬೇಡಿಕೆಯನ್ನು ಪರಿಷ್ಕರಿಸಿ ತಂತ್ರಾಂಶದಲ್ಲಿಯೇ ಮಾಹಿತಿ ನೀಡಬಹುದು.
6) ಫಲಾನುಭವಿಗೆ ತನ್ನ ಅರ್ಜಿಯ ಹಂತವನ್ನು ಅಂದರೆ ಆಯ್ಕೆಯಾಗಿದೆಯೇ, ಆಯ್ಕೆಯಾಗಿದಲ್ಲಿ [illegible]

(ಆ) ಇಲಾಖೆಗೆ ಸಂಬಂಧಿಸಿದ ಅನುಕೂಲಗಳು:

1) ಫಲಾನುಭವಿಗಳ ಗುರಿ ನಿಗದಿ ಆಯ್ಕೆ ಪ್ರಕ್ರಿಯೆ ಮತ್ತು ಅನುಷ್ಠಾನದ ಹಂತಗಳನ್ನು ನಿಗಧಿತ ವೇಳಾಪಟ್ಟಿಯಂತೆ ಮಾಡಬಹುದು.
2) ಯೋಜನೆಯ ವಿವಿಧ ಹಂತಗಳಾದ ಆಯ್ಕೆ, ಬ್ಯಾಂಕಗಳಿಗೆ ಸಲ್ಲಿಕೆ, ಖಜಾನೆಗೆ ಸಲ್ಲಿಕೆ, ಸಹಾಯಧನ ಬ್ಯಾಂಕಗಳಿಗೆ ನೀಡಿಕೆ, ಸವಲತ್ತು ವಿತರಣೆ, ಸವಲತ್ತು ಉಪಯೋಗಿಸಿಕೊಂಡಿರುವ ಮುಂತಾದವುಗಳ ಭೌತಿಕ ಮತ್ತು ಆರ್ಥಿಕ ಮಾಹಿತಿಯನ್ನು ಆಯಾ ಸಮಯ (Real time) ದಲ್ಲಿಯೇ ದೊರೆಯುವುದು.
3) ಈ ರೀತಿ ಆಯಾ ಸಮಯದ (Real time) ಮಾಹಿತಿಯಿಂದ ಯೋಜನೆಯ ಪ್ರಗತಿಯನ್ನು ಗುಣಾತ್ಮಕ ಪರಿಶೀಲನೆ ಮಾಡಿ ಸೂಕ್ತ ನಿರ್ದೇಶನಗಳನ್ನು ನೀಡಲು ಸಾಧ್ಯವಾಗುತ್ತದೆ.

2019-20ನೇ ಸಾಲಿನ ಈ ಮುಂದೆ ತಿಳಿಸಿರುವ ಫಲಾನುಭವಿ ಆಧಾರಿತ ಯೋಜನೆಗಳ ಮಾರ್ಗಸೂಚಿಗಳನ್ನು ಪಾಲಿಸುತ್ತಾ "ಪಶುಭಾಗ್ಯ" ತಂತ್ರಾಂಶದಲ್ಲಿಯೇ ಆಗಿಂದಾಗಲೇ ಎಲ್ಲಾ ಮಾಹಿತಿಯನ್ನು ಇಂದೀಕರಿಸಲು ಆದೇಶಿಸಿದೆ. ಇನ್ನು ಮುಂದೆ ಈ ತಂತ್ರಾಂಶದಲ್ಲಿರುವ ಮಾಹಿತಿ ಆಧಾರದ ಮೇಲೆಯೆ ವಿವಿಧ ಹಂತಗಳಲ್ಲಿ ಅಂದರೆ ರಾಜ್ಯ, ಜಿಲ್ಲಾ, ತಾಲ್ಲೂಕುಗಳ ಪ್ರಗತಿಯನ್ನು ಪರಿಶೀಲಿಸಲಾಗುವುದು. ಹಿಂದಿನ ಐದು ಸಾಲುಗಳಲ್ಲಿ ಅನುಷ್ಠಾನ ಮಾಡಿರುವ ಫಲಾನುಭವಿ ಆಧಾರಿತ ಯೋಜನೆಗಳ ಫಲಾನುಭವಿಗಳ ಮಾಹಿತಿಯನ್ನು ಸಹಾ ಇಂದೀಕರಿಸಲು ಈ ಮೂಲಕ ಸೂಚಿಸಿದೆ.

2. ಯೋಜನಾ ವ್ಯಾಪ್ತಿ

ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

3. ಅರ್ಹ ಫಲಾನುಭವಿಗಳು

ಅ. ಫಲಾನುಭವಿ ಆಧಾರಿತ ಕಾರ್ಯಕ್ರಮಕ್ಕೆ ಆದ್ಯತೆಯ ಮೇರೆಗೆ ಫಲಾನುಭವಿಗಳನ್ನಾಗಿ ಕೂಲಿ ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.

ಆ. ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3) ಅಲ್ಪಸಂಖ್ಯಾತರಿಗೆ (ಶೇ.15) ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.

ಇ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು. (ಪ್ರಮಾಣ ಪತ್ರದಲ್ಲಿ RD No. ಇರಬೇಕು)

ಈ. ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು

4. ಫಲಾನುಭವಿಯ ಆಯ್ಕೆ

ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಸಾಕಷ್ಟು ಪ್ರಚಾರ ನೀಡಿ (ಪತ್ರಿಕಾ ಪ್ರಕಟಣೆ ಮೂಲಕ) ಆಸಕ್ತಿಯುಳ್ಳವರಿಂದ "ಪಶುಭಾಗ್ಯ" ತಂತ್ರಾಂಶದ ಮುಖಾಂತರ ಫಲಾನುಭವಿಗಳ ಅರ್ಜಿ ಪಡೆದು, ವಿಧಾನ ಸಭಾ ಕ್ಷೇತ್ರದ ಆಯ್ಕೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನು ಆಯ್ಕೆ ಮಾಡುವುದು.

ಸದಸ್ಯ ಕಾರ್ಯದರ್ಶಿಯವರ ಕಾರ್ಯ

ಅ. ಫಲಾನುಭವಿಗಳ ಆಯ್ಕೆ ಮುಗಿದ ಕೂಡಲೇ "ಪಶುಭಾಗ್ಯ ತಂತ್ರಾಂಶ"ದಲ್ಲಿ ತಪ್ಪದೆ ನಮೂದಿಸುವುದು.

ಆ. ಆಯ್ಕೆ ನಂತರ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳು ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.

6. **ಯೋಜನಾ ಅನುಷ್ಠಾನ ವಿಧಾನ**

1) ರಾಜ್ಯ ಮಟ್ಟದಲ್ಲಿ ಜಿಲ್ಲೆಯ ಗ್ರಾಮೀಣ ಭಾಗದ ಜನಸಂಖ್ಯೆಗೆ (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ) ಅನುಗುಣವಾಗಿ ಹಾಗೂ ಅಗತ್ಯತೆಯನುಸಾರ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸುವುದು.

2) ಜಿಲ್ಲಾ ಉಪ ನಿರ್ದೇಶಕರುಗಳು ತಾಲ್ಲೂಕುವಾರು ಮತ್ತು ಘಟಕವಾರು ಆಯಾ ತಾಲ್ಲೂಕಿನಲ್ಲಿರುವ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ / ಸಾಮಾನ್ಯ) ಅನುಸಾರವಾಗಿ ಹಂಚಿಕೆ ಮಾಡುವುದು ಹಾಗೂ ಅದಕ್ಕೆ ತಕ್ಕಂತೆ ಅನುದಾನವನ್ನು ಮರುಹಂಚಿಕೆ ಮಾಡುವುದು.

3) ಸಹಾಯಕ ನಿರ್ದೇಶಕರು ಆಯಾ ತಾಲ್ಲೂಕಿಗೆ ನಿಗದಿಯಾದ ಗುರಿಗಳ ಪೈಕಿ ವಿಧಾನಸಭಾ ಕ್ಷೇತ್ರವಾರು ಗುರಿಗಳನ್ನು ಮತ್ತು ಅದಕ್ಕೆ ತಕ್ಕಂತೆ ಅನುದಾನವನ್ನು ಮರು ಹಂಚಿಕೆ ಮಾಡಿ, ಆಸಕ್ತ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನ ಮಾಡಿ "ಪಶುಭಾಗ್ಯ ತಂತ್ರಾಂಶ"ದಲ್ಲಿ ಅಳವಡಿಸುವುದು.

4) ಸಹಾಯಕ ನಿರ್ದೇಶಕರು ಅರ್ಹ ಫಲಾನುಭವಿಗಳ ಆಯ್ಕೆಗಾಗಿ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿನ ಸಮಿತಿ ಮುಂದೆ ಮಂಡಿಸಲು ಈಗಾಗಲೇ ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು "ಪಶು ಭಾಗ್ಯ ತಂತ್ರಾಂಶ"ದ ಮೂಲಕ ಪಡೆದು ಮಂಡಿಸಿ ನಿಗದಿತ ಗುರಿಗೆ ಅನುಗುಣವಾಗಿ ಆಯ್ಕೆ ಮಾಡುವುದು.

5) ಫಲಾನುಭವಿಗಳನ್ನು ಆಯ್ಕೆಗೊಳಿಸುವಾಗ ಮುಖ್ಯ ಮಂತ್ರಿಗಳ ಕಾರ್ಯಾಲಯದಿಂದ, ಇಲಾಖಾ ಸಚಿವರಿಂದ, ಸಚಿವಾಲಯದಿಂದ, ಆಯುಕ್ತಾಲಯದಿಂದ "ಜನಸ್ಪಂದನ" ಕೋಶದಿಂದ ಸ್ವೀಕರಿಸಿರುವ ಅರ್ಜಿಗಳನ್ನು ಸಹಾ ಫಲಾನುಭವಿಗಳ ಆಯ್ಕೆ ವೇಳೆ ಪರಿಗಣಿಸುವುದು.

6) ಉಪ ನಿರ್ದೇಶಕರು ಜಿಲ್ಲೆಗೆ ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಮಾಹಿತಿ ಪಡೆದು ತಾಲ್ಲೂಕುವಾರು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಬ್ಯಾಂಕ್‌ವಾರು ನಿಗದಿಪಡಿಸಲು ಕ್ರಮವಹಿಸುವುದು.

7) ಫಲಾನುಭವಿಗಳಿಂದ ವಂತಿಗೆ ಸ್ವೀಕರಿಸುವಂತಹ ಯೋಜನೆಗಳನ್ನು ವಂತಿಗೆ ಹಣವನ್ನು ಫಲಾನುಭವಿಗಳಿಂದ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಸ್ವತ್ತನ್ನು ಮಾರಾಟ ಮಾಡಿರುವವರಿಗೆ ಪಾವತಿಸುವಂತೆ ಅನುಷ್ಠಾನಾಧಿಕಾರಿಗಳೇ ಕಾರ್ಯಗತಗೊಳಿಸುವುದು.

8) ಸಹಾಯಕ ನಿರ್ದೇಶಕರು ವಿಳಂಬವಿಲ್ಲದೆ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ದಾಖಲೆಗಳೊದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು ಹಾಗು ಈ ಬಗ್ಗೆ ಪಶುಬಾಗ್ಯ ತಂತ್ರಾಂಶದಲ್ಲಿ ನಮೂದಿಸುವುದು.

9) ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪತ್ರ ಪಡೆದು ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

1.	ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು	ಅಧ್ಯಕ್ಷರು
2.	ತಾಲ್ಲೂಕಿನ ಖಾಯಂ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು	ಸದಸ್ಯರು
3.	ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ	ಸದಸ್ಯರು
4.	ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ	ಸದಸ್ಯರು
5.	ಶಿಶು ಅಭಿವೃದ್ಧಿ ಯೋಜನಾಧಿಕಾರಿ	ಸದಸ್ಯರು
6.	ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿ(ಆಡಳಿತ)	ಸದಸ್ಯ ಕಾರ್ಯದರ್ಶಿ

ಕೇಂದ್ರಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ, ಇತರ ತಾಲ್ಲೂಕುಗಳ ಅಧಿಕಾರಿಗಳಾದ ಸದಸ್ಯರುಗಳಾಗಿರುತ್ತಾರೆ.

ವಿಧಾನಸಭೆ ಕ್ಷೇತ್ರದಲ್ಲಿ ಹೆಚ್ಚು ಭೌಗೋಳಿಕ ವಿಸ್ತಾರ ಇರುವ ತಾಲ್ಲೂಕಿನ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಪಶು ಆಸ್ಪತ್ರೆಯ / ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಕಚೇರಿಯ ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ರವರು ಈ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಇದೇ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಇತರ ತಾಲ್ಲೂಕುಗಳ ಸಂಬಂಧಿಸಿದ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು (ಕ್ರಮ ಸಂಖ್ಯೆ 3,4,5,6) ರವರು ಸಹ ಸದಸ್ಯರಾಗಿರುತ್ತಾರೆ. ಅದೇ ರೀತಿ ಇದೆ ಕ್ಷೇತ್ರದಲ್ಲಿ ಹೆಚ್ಚು ತಾಲ್ಲೂಕುಗಳು ಬಂದಲ್ಲಿ ಕ್ಷೇತ್ರದ ಕೇಂದ್ರಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ ಇತರ ತಾಲ್ಲೂಕುಗಳ ಅಧಿಕಾರಿಗಳು ಸಹ ಕಾರ್ಯದರ್ಶಿಗಳಾಗಿರುತ್ತಾರೆ.

5. ಸಮಿತಿಯ ಕಾರ್ಯವ್ಯಾಪ್ತಿ

ಅ. ಫಲಾನುಭವಿಗಳನ್ನು ನಿರ್ದಿಷ್ಟ ಸಮಯದಲ್ಲಿ ವಿವಿಧ ಯೋಜನೆಗಳ ನಿಗದಿತ ಗುರಿಗಳನ್ವಯ ಆಯ್ಕೆ ಮಾಡಿ, ಈ ಕಾರ್ಯಕ್ರಮವು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆ ನೀಡುವುದು.

ಆ. ಯೋಜನೆಯಲ್ಲಿ ಲೋಪದೋಷಗಳು ಕಂಡುಬಂದರೆ ಅಂತಹವುಗಳನ್ನು ನಿವಾರಿಸಲು ಸಲಹೆ ನೀಡುವುದು.

ಇ. ಗುಣಮಟ್ಟದ ಸ್ವತ್ತುಗಳನ್ನು ಖರೀದಿಸಲು ಸಲಹೆ ನೀಡುವುದು.

ಈ. ಫಲಾನುಭವಿಯ ನಿರಾಸಕ್ತಿ, ಇನ್ನಿತರೆ ಕಾರಣಗಳಿಂದ ಸರ್ಕಾರದಿಂದ ಬಿಡುಗಡೆ ಆದ ಅನುದಾನವು ಬಳಕೆಯಾಗದ ಸಂದರ್ಭದಲ್ಲಿ ಅನುದಾನಕ್ಕೆ ಅನುಗುಣವಾಗಿ ಪರ್ಯಾಯ ಫಲಾನುಭವಿಗಳನ್ನು ಆಯ್ಕೆ ಮಾಡಿ ಅನುಷ್ಠಾನ ಮಾಡುವುದು.

8. ಸಹಾಯಧನ ಸೆಳೆಯುವ ವಿಧಾನ

ಅನುಷ್ಠಾನಾಧಿಕಾರಿಗಳು ಘಟಕವಾರು ಬಿಲ್ಲನ್ನು ರಾಜ್ಯ ವಲಯದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಬಿಳಿಬಣ್ಣದ ಬಿಲ್ಲಿನಲ್ಲಿ ತಯಾರಿಸಿ ಕೆಳಕಂಡ ದಾಖಲಾತಿಗಳು ಮತ್ತು ದೃಢೀಕರಣದೊಂದಿಗೆ ಮೇಲುರುಜುವಿಗಾಗಿ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.

1) ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಸಮಿತಿ ಸದಸ್ಯರುಗಳ ಸಹಿಯೊಂದಿಗೆ ಪಟ್ಟಿಯನ್ನು ಪಶು ಭಾಗ್ಯ ತಂತ್ರಾಂಶದಲ್ಲಿರುವ ಮಾಹಿತಿಯೊಂದಿಗೆ ಉಪ ನಿರ್ದೇಶಕರು ಸಮೀಕರಿಸುವುದು.
2) FRUIT ID ಇರುವ ದೃಢೀಕರಣ ಪತ್ರ.
3) ಫಲಾನುಭವಿಯ ಭಾವಚಿತ್ರ.
4) ಫಲಾನುಭವಿಯ ಕುಟುಂಬ ಈ ಹಿಂದೆ ಇಲಾಖೆಯಿಂದ ಸಹಾಯ ಪಡೆಯದಿರುವ ಬಗ್ಗೆ ದೃಢೀಕರಣ ಪತ್ರ.
5) ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ (ನಿಗದಿತ ನಮೂನೆಯಲ್ಲಿ)ಪಡೆಯುವುದು.
6) ಫಲಾನುಭವಿಯಿಂದ ಸಹಾಯಧನ ಪಡೆದಿರುವ ಬಗ್ಗೆ ಮುಂಗಡ ರಸೀತಿ (ತ್ರಿಪ್ರತಿಯಲ್ಲಿ)

9. ಸ್ವತ್ತು ಖರೀದಿ ಸಮಿತಿ

1) ಫಲಾನುಭವಿಯ ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಸಹಾಯಕ ನಿರ್ದೇಶಕರು / ಪಶುವೈದ್ಯಾಧಿಕಾರಿ.
2) ಬ್ಯಾಂಕ್ ಅಧಿಕಾರಿ / ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ)
3) ಫಲಾನುಭವಿ.
4) ಮಾರಾಟಗಾರ

9. ಯೋಜನೆ ಮೇಲ್ವಿಚಾರಣೆ

1) ಅನುಷ್ಠಾನಾಧಿಕಾರಿಗಳು ಸ್ವತ್ತು ಖರೀದಿ ಸಮಿತಿ ಮೂಲಕ ರಾಸುಗಳ ಖರೀದಿ ಮಾಡುವುದು
2) ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.
3) ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ರಾಸುಗಳ ಆರೋಗ್ಯ ರಕ್ಷಣೆ, ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು
4) ವಿತರಿಸಿದ ಸ್ವತ್ತುಗಳ ಅನುಪಾಲನೆ ವಹಿ (Asset register) ನಿರ್ವಹಿಸುವುದು.
5) ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು, ದೃಢೀಕರಿಸಿ ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು.
6) ಉಪ ನಿರ್ದೇಶಕರುಗಳು ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ / ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ವರದಿ ಪಶು ಭಾಗ್ಯ ತಂತ್ರಾಂಶದಲ್ಲಿ ಸಲ್ಲಿಸುವುದು.
7) ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲೂಕು ಸಹಾಯಕ ನಿರ್ದೇಶಕರು ಶೇ.5ರಷ್ಟು ಫಲಾನುಭವಿಗಳ ಮನೆಗೆ ಭೇಟಿ ನೀಡಿ ಅನುಷ್ಠಾನದ ಮತ್ತು ಸ್ವತ್ತನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲನೆ ಮಾಡಬೇಕು.

10) ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗು ಸಹಕಾರಿ ಸಂಘಗಳ ಮುಖಾಂತರವೂ ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
11) ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕುಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
12) ಆಯ್ಕೆಗೊಂಡ ಫಲಾನುಭವಿಗಳ ರಾಸುಗಳಿಗೆ UID ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ. ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಸ್ಥಿತಿಯೊಂದಿಗೆ ಇರುವ ಪೋಟೋವನ್ನು "ಪಶುಭಾಗ್ಯ ತಂತ್ರಾಂಶ"ದಲ್ಲಿ ಎಲ್ಲಾ ವಿವರಗಳೊಂದಿಗೆ ದಾಖಲಿಸುವುದು.
13) ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯ್ತಿ ಪಿ.ಡಿ.ಓ.ಗಳಿಗೆ ಹಾಗು ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳಿಗಳಿಗೆ ಮಾಹಿತಿ ನೀಡುವುದು.
14) ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಸಹಾಯಧನದ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.
15) ಈ ಯೋಜನೆಯಡಿಯ ಫಲಾನುಭವಿಗಳ ಸ್ವತ್ತುಗಳನ್ನು ವಿಮೆಗೊಳಪಡಿಸಲು ಕ್ರಮ ವಹಿಸುವುದು.
16) ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮವಹಿಸುವುದು.
17) ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಪ್ಪದೆ ಕ್ರಮವಹಿಸುವುದು.

7. ಯೋಜನಾ ಅನುಷ್ಠಾನಾಧಿಕಾರಿಗಳು

ಸ್ಥಳೀಯ ಅಧಿಕಾರಿಗಳಾದ ಸಹಾಯಕ ನಿರ್ದೇಶಕರು ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1) ಸಾಲ ಮಂಜೂರಾತಿ ಪತ್ರ.
2) FRUITS ID ದೃಢೀಕರಣ ಪತ್ರ
3) ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ.
4) ಫಲಾನುಭವಿಯೊಂದಿಗೆ ರಾಸುವಿನ ಭಾವಚಿತ್ರ – 3 ವಿವಿಧ ಕೋನಗಳಲ್ಲಿ.
5) ಸ್ವತ್ತು ಖರೀದಿ ನಗದು ರಸೀದಿ.
6) ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ.
7) ಸಾಗಾಣಿಕೆ ವೆಚ್ಚದ ಬಿಲ್ (ರಶೀದಿ).
8) ಪಶು ಆಹಾರ ಖರೀದಿ ಬಿಲ್‌ಗಳು.
9) ಇತರೆ ದಾಖಲಾತಿಗಳು.

ಕುರಿ ಅಥವಾ ಆಡುಗಳ ಘಟಕ (10+1)

[illegible]	[illegible]	[illegible]
1	ಆರು ತಿಂಗಳ ವಯಸ್ಸಿಗೆ ಮೇಲ್ಪಟ್ಟ 10 ಕುರಿ/ಮೇಕೆ ಖರೀದಿಗೆ (ಒಂದು ಕುರಿ/ಮೇಕೆಗೆ 6000/-ರಂತೆ) ಗರಿಷ್ಠ ಮೊತ್ತ	60,000
2	ಆರು ತಿಂಗಳ ವಯಸ್ಸಿಗೆ ಮೇಲ್ಪಟ್ಟ ಒಂದು ಟಗರು / ಹೋತ ಖರೀದಿ ಮೊತ್ತ	8,000
3	ಸಾಗಾಣಿಕೆ ಮತ್ತು ಇತರೆ ವೆಚ್ಚ	2,000
	ಒಟ್ಟು ಮೊತ್ತ	70,000

2) ಹಂದಿ ಮಾಂಸದ ಘಟಕ (ವಿಸ್ತೃತ ಯೋಜನಾ ವರದಿ ಲಗತ್ತಿಸಿದೆ)

[illegible]	[illegible]	[illegible]
1	ಮಾಂಸದ ಅಂಗಡಿ ನವೀಕರಣ / ನಿರ್ಮಾಣ ಗರಿಷ್ಠ	60,000
2	ಕಟ್ಟಡದ ಒಳಗೆ ವಿಭಜಕಗಳನ್ನು ಮಾಡಲು	40,000
3	ಎರಡು 400 ಲೀಟರ್ ಶೈತ್ಯಾಗಾರಗಳನ್ನು ಕೊಳ್ಳಲು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು	60,000
4	ತೂಕದ ಯಂತ್ರ, ನೀರಿನ ವ್ಯವಸ್ಥೆ, ಮಾಂಸ ಕತ್ತರಿಸಲು ಬೇಕಾದ ಪರಿಕರಗಳು ಮತ್ತು ಪ್ಯಾಕಿಂಗ್ ವಸ್ತುಗಳು	30,000
	ಒಟ್ಟು ಮೊತ್ತ	1,50,000

3) 3 ಕುರಿ ಅಥವಾ 3 ಆಡುಗಳ ಘಟಕ

[illegible]	[illegible]	[illegible]
1	ಆರು ತಿಂಗಳ ವಯಸ್ಸಿನ 03 ಕುರಿ / ಮೇಕೆ ಖರೀದಿಗೆ (ಒಂದು ಕುರಿ/ಮೇಕೆಗೆ 5000/-ರಂತೆ) ಗರಿಷ್ಠ ಮೊತ್ತ	15,000

23/07/2015

(ಟಿ. ಹನುಮಂತೇಗೌಡ)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,

(ಪಶುಸಂಗೋಪನೆ)

8) ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಪ್ರತಿ ಮಾಹೆ ಒಮ್ಮೆ ಖುದ್ದು ಭೇಟಿ ನೀಡಿ ಸ್ವತ್ತು ಪರಿಶೀಲನೆ ಮಾಡಿ ಪಶುಭಾಗ್ಯ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸುವುದು ಮತ್ತು ಈ ಕುರಿತು ಸ್ವತ್ತು ಅನುಸರಣೆ ವಹಿಯಲ್ಲಿ ನಮೂದಿಸುವುದು.

10. ಕ್ರಮಗಳು

1) ಸ್ವತು ಖರೀದಿ ಸಮಯದಲ್ಲಿ ಆಯಾ ಪ್ರದೇಶಕ್ಕೆ ಸೂಕ್ತವಾದ ತಳಿಯನ್ನು ಖರೀದಿಗೆ ಆದ್ಯತೆ ನೀಡುವುದು.

2) ವಿವಿಧ ಯೋಜನೆಗಳಲ್ಲಿ ಬರುವ ಘಟಕದಲ್ಲಿರುವಂತೆ ರಾಸುಗಳನ್ನು ಖರೀದಿಸಿ, ಮೂರು ವರ್ಷದ ವಿಮೆ ಕಡ್ಡಾಯವಾಗಿ ಮಾಡಿಸುವುದು.

3) ಸ್ವತ್ತು ಖರೀದಿ ಮಾಡುವಾಗ: ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ (Recently Calved) ದಿನಕ್ಕೆ 08 ರಿಂದ 10 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಮಿಶ್ರ ತಳಿ ಹಸು ಅಥವಾ ಇತ್ತೀಚೆಗೆ ಕರು ಹಾಕಿದ / ತುಂಬು ಗರ್ಭದ ದಿನಕ್ಕೆ 05 ರಿಂದ 06 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಒಂದು ಸುಧಾರಿತ ಎಮ್ಮೆ ಖರೀದಿ ಮಾಡುವುದು.

4) ಹೈನುಗಾರಿಕೆ ಯೋಜನೆಯಡಿಯಲ್ಲಿ ಖರೀದಿ ಸಮಿತಿಯ ವಿವೇಚನೆಗೆ ಒಳಪಟ್ಟು ರಾಸುಗಳನ್ನು ಹೊರ ಜಿಲ್ಲೆ / ಹೊರ ರಾಜ್ಯಗಳಿಂದ ಖರೀದಿಸುವುದು.

5) ಮಿಶ್ರ ತಳಿ ಹಸು / ಸುಧಾರಿತ ಎಮ್ಮೆ / ರಾಸುಗಳನ್ನು ಖರೀದಿ ಸ್ಥಳದಿಂದ ಫಲಾನುಭವಿಯ ಕೊಟ್ಟಿಗೆಯವರೆಗೆ ಸಾಗಾಣಿಕೆ ಮಾಡಲು ಭರಿಸುವ ವೆಚ್ಚವನ್ನು ಯೋಜನಾ ವೆಚ್ಚದಿಂದಲೇ ನೀಡುವುದು.

6) ಹಂದಿ ಮಾಂಸದ ಘಟಕದ ಯೋಜನೆಯನ್ನು ಯೋಜನಾ ವರದಿಯಲ್ಲಿರುವಂತೆ ಅನುಷ್ಠಾನಗೊಳಿಸುವುದು (ಲಗತ್ತಿಸಿದೆ).

11. ಅನುಷ್ಠಾನಗೊಳಿಸಬಹುದಾದ ವಿವಿಧ ಘಟಕಗಳು

[illegible]	[illegible]	[illegible]	ಪ ಜಾ/ಪ ಪಂ (ಶೇ90)	ಸಾಮಾನ್ಯ (ಶೇ50)
1	ಹೈನುಗಾರಿಕೆ ಘಟಕ* (ಒಂದು ಮಿಶ್ರ ತಳಿ ಹಸು ಅಥವಾ ಸುಧಾರಿತ ಎಮ್ಮೆ)	60,000	54,000	30,000
2	ಕುರಿ ಅಥವಾ ಆಡುಗಳು ಘಟಕ (10+1)*	70,000	63,000	-
3	ಹಂದಿ ಮಾಂಸದ ಮಳಿಗೆ ಘಟಕ*	1,50,000	1,35,000	-
4.	3 ಕುರಿ ಅಥವಾ 3 ಆಡುಗಳು**	15,000	13,500	10,000
*	ಕ್ರಮ ಸಂಖ್ಯೆ 1 ರಿಂದ 3ರವರೆಗಿನ ಯೋಜನೆಗಳಿಗೆ ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು			
**	ಕ್ರಮ ಸಂಖ್ಯೆ 4ರ ಯೋಜನೆಗೆ ಘಟಕದ ಸಹಾಯಧನವನ್ನು ಬಿಟ್ಟು ಉಳಿದ ಮೊತ್ತವನ್ನು ಫಲಾನುಭವಿಗಳಿಂದ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ಸಹಾಯಧನವನ್ನು ಸಹಾ ಅದೇ ಖಾತೆಗೆ ಜಮಾ ಮಾಡಿ ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಳಿಸುವುದು			

ಘಟಕದ ವಿವರಗಳು

1) ಹೈನುಗಾರಿಕೆ ಘಟಕ ವಿವರ

ಕ್ರ.ಸಂ.	[illegible]	ಮೊತ್ತ (ರೂಗಳಲ್ಲಿ)
1	ಒಂದು ಮಿಶ್ರ ತಳಿ ಹಾಲು ಕರೆಯುವ ಹಸು (08–10 ಲೀ) ಅಥವಾ ಸುಧಾರಿತ ಎಮ್ಮೆ(05–06 ಲೀ) ಖರೀದಿಗೆ (ಗರಿಷ್ಠ ಮೊತ್ತ)	52,000
	ಅ) ಜಾನುವಾರು ವಿಮೆ ಮೊತ್ತ (ಮೂರು ವರ್ಷಕ್ಕೆ)	2,500
	ಆ) ಸಾಗಾಣಿಕೆ ವೆಚ್ಚ (ಗರಿಷ್ಠ) ಮತ್ತು ಇತರೆ	2,500
	[illegible]	2,000

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 272 ಸಲೆವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:03.11.2020

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ **ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ್)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2004 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ **ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ್)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2004 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

Recd
03/11/2020

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ್)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2004

ಉತ್ತರಿಸಬೇಕಾದ ದಿನಾಂಕ : 30.09.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಎತ್ತು, ಎಮ್ಮೆ ಹಾಗೂ ಹಸುಗಳು ಆಕಸ್ಮಿಕ ಮರಣದಿಂದಾಗಿ ಆರ್ಥಿಕ ನಷ್ಟ ಅನುಭವಿಸುತ್ತಿರುವ ರೈತರುಗಳಿಗೆ ಪರಿಹಾರವನ್ನು ವಿತರಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು;	ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017, ದಿನಾಂಕ: 05.08.2017 ರಂತೆ, ವಿಮೆಗೆ ಒಳಪಡದ ಎತ್ತು ಮತ್ತು ಹಸುಗಳು ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಠ ರೂ.10,000/- ಮಿತಿಯೊಳಗೆ ಪರಿಹಾರಧನವನ್ನು ನೀಡುವ ಸೌಲಭ್ಯವನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಸದರಿ ಕಾರ್ಯಕ್ರಮವು 2018-19 ಹಾಗೂ 2019-20 ನೇ ಸಾಲಿನಲ್ಲಿಯೂ ಜಾರಿಯಲ್ಲಿರುತ್ತದೆ. ಆದರೆ, 2019-20 ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಹೊರತುಪಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗಿದೆ. ಸಾಗರ ಹಾಗೂ ಹೊಸನಗರ ತಾಲ್ಲೂಕಿನ ರೈತರುಗಳಿಗೆ ಅನುದಾನ ಲಭ್ಯತೆ ಹಾಗೂ ಪ್ರಸ್ತಾವನೆ ಸ್ವೀಕೃತಿಯ ಜ್ಯೇಷ್ಠತೆಯನ್ವಯ ಪರಿಹಾರ ಧನ ನೀಡಲಾಗಿದೆ.
ಆ	ಹಾಗಿದ್ದಲ್ಲಿ, ಆರ್ಥಿಕ ನಷ್ಟ ಅನುಭವಿಸುತ್ತಿರವ ರೈತರುಗಳಿಗೆ ಪರಿಹಾರವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)?	ಸಾಗರ ಹಾಗೂ ಹೊಸನಗರ ತಾಲ್ಲೂಕಿನ ರೈತರುಗಳಿಗೆ ಅನುದಾನ ಲಭ್ಯತೆ ಹಾಗೂ ಪ್ರಸ್ತಾವನೆ ಸ್ವೀಕೃತಿಯ ಜೇಷ್ಠತೆಯನ್ವಯ ಪರಿಹಾರ ಧನ ನೀಡಲಾಗಿದೆ.

ತಾಲ್ಲೂಕು	2017-18	2018-19	2019-20
ಸಾಗರ	17	149	37
ಹೊಸನಗರ	4	33	12

ಪಸಂಮೀ ಇ-272 ಸಲೆವಿ 2020

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ ಇ-258 ಸಲೆವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:02.11.2020

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1933 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1933 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಬಿ.ಎನ್.ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

Recd
03/11/2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1933

ವಿಧಾನಸಭೆ ಸದಸ್ಯರು : ಶ್ರೀ ಮಂಜುನಾಥ ಎ (ಮಾಗಡಿ)

ಉತ್ತರಿಸುವ ದಿನಾಂಕ : 30.09.2020

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ. ಹಜ್ ಮತ್ತು ವಕ್ಫ್ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಹಾಲು ಉತ್ಪಾದಕರ ಸಹಕಾರ ಸಂಘದಿಂದ ಪ್ರತಿ ನಿತ್ಯ ಹೊರ ರಾಜ್ಯಗಳಿಗೆ ಹಾಲನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ಹೌದು.</td></tr>
<tr><td>ಆ)</td><td>ಹಾಗಿದ್ದಲ್ಲಿ, ಯಾವ ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಪ್ರತಿ ನಿತ್ಯ ಹಾಲನ್ನು ಸರಬರಾಜು ಮಾಡಲಾಗುತ್ತಿದೆ; ನಿಗದಿಪಡಿಸಿರುವ ದರ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು);</td><td>ಬೆಂಗಳೂರು ಹಾಲು ಒಕ್ಕೂಟದಿಂದ ತಮಿಳುನಾಡು ರಾಜ್ಯಕ್ಕೆ ಪ್ರತಿ ನಿತ್ಯ ಸರಾಸರಿ 3100 ಲೀಟರ್ ನಂದಿನಿ ಬ್ರಾಂಡ್‌ನ ಹಾಲನ್ನು ತಮಿಳು ಭಾಷೆ ಮತ್ತು ತೆಲುಗು ಭಾಷೆ ಆರ್ಟ್ ವರ್ಕ್‌ನಲ್ಲಿ ಬೆಂಗಳೂರು ಹಾಲು ಒಕ್ಕೂಟದಲ್ಲಿಯೇ ಪ್ಯಾಕ್ ಮಾಡಿ ಸ್ಯಾಚೆಟ್ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ. ದರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ.ಸಂ</th><th>ಹಾಲು ಮತ್ತು ಹಾಲಿನ ಉತ್ಪನ್ನ</th><th>ಪರಿಮಾಣ</th><th>ಪ್ರತಿ ಕೆ.ಜಿ/ಲೀಗೆ ಬಿಲ್ಲಿಂಗ್ ದರ (Ex Dairy)</th></tr>
<tr><td>1</td><td rowspan="4">Nandini Special Toned Milk</td><td>250 ml</td><td>32.00</td></tr>
<tr><td>2</td><td>500 ml</td><td>32.00</td></tr>
<tr><td>3</td><td>1000ml</td><td>32.00</td></tr>
<tr><td>4</td><td>6000ml</td><td>32.00</td></tr>
<tr><td>5</td><td rowspan="3">Nandini Standardised Milk</td><td>500ml</td><td>34.00</td></tr>
<tr><td>6</td><td>1000ml</td><td>34.00</td></tr>
<tr><td>7</td><td>6000ml</td><td>34.00</td></tr>
<tr><td>8</td><td rowspan="3">Nandini Full Cream Milk</td><td>200ml</td><td>38.00</td></tr>
<tr><td>9</td><td>500ml</td><td>37.00</td></tr>
<tr><td>10</td><td>1000ml</td><td>37.00</td></tr>
<tr><td>11</td><td rowspan="3">Nandini Curd</td><td>200Gms</td><td>35.50</td></tr>
<tr><td>12</td><td>500 Gms</td><td>35.50</td></tr>
<tr><td>13</td><td>1000Gms</td><td>35.50</td></tr>
</table>
ಕರ್ನಾಟಕ ಹಾಲು ಮಹಾಮಂಡಳದ ಆದೇಶದಂತೆ ಆಂಧ್ರಪ್ರದೇಶದ ಸಹಕಾರ ಡೇರಿ ಸಂಸ್ಥೆ ವಿಶಾಖ ಡೇರಿಗೆ ಪ್ರತಿ ನಿತ್ಯ ಸರಾಸರಿ ಅಂದಾಜು 31,256 ಲೀಟರ್ ಹಾಲನ್ನು ಸಗಟು ರೂಪದಲ್ಲಿ ಪ್ರತಿ ಲೀಟರ್ ಹಾಲಿಗೆ ರೂ. 28.50/- ರಂತೆ ಟ್ಯಾಂಕರ್ ಮೂಲಕ ಮಾರಾಟ ಮಾಡಲಾಗುತ್ತಿದೆ.</td></tr>
<tr><td>ಇ)</td><td>ಈ ಸಂಘದಿಂದ ತಮಿಳುನಾಡಿಗೆ ಸರಬರಾಜು ಆಗುತ್ತಿರುವ ಹಾಲಿಗೆ ನಂದಿನಿ ಹಾಲಿನ ಬ್ರಾಂಡ್ ಹಾಕಿ ಹಾಲನ್ನು ಮಾರಾಟ ಮಾಡಲಾಗುತ್ತಿದೆಯೇ; ತಮಿಳುನಾಡಿಗೆ ಹಾಲನ್ನು ಸರಬರಾಜು ಮಾಡುವ ಒಪ್ಪಂದದಲ್ಲಿ ನಂದಿನಿ ಹಾಲಿನ ಬ್ರಾಂಡ್‌ನ್ನು ನಮೂದಿಸಲು ಷರತ್ತು ವಿಧಿಸಲಾಗಿದೆಯೇ;</td><td>ಹೌದು. ಒಕ್ಕೂಟದ ವತಿಯಿಂದ ತಮಿಳುನಾಡಿನಲ್ಲಿ ನಂದಿನಿ ಬ್ರಾಂಡ್‌ನ ಹಾಲನ್ನು ಬೆಂಗಳೂರು ಹಾಲು ಒಕ್ಕೂಟದ ಡೇರಿ ಘಟಕದಲ್ಲಿ ಪ್ಯಾಕ್ ಮಾಡಿ ರೆಫ್ರಿಜರೇಟೆಡ್ ವಾಹನದ ಮೂಲಕ ಸಾಗಾಣಿಕೆ ಮಾಡಿ ಮಾರಾಟ ಮಾಡಲಾಗುತ್ತಿದೆ.</td></tr>
</table>

ಈ)	ಸದರಿ ಸಂಘದಿಂದ ತಮಿಳುನಾಡಿಗೆ ಸರಬರಾಜು ಮಾಡುತ್ತಿರುವ ಹಾಲಿಗೆ ನಂದಿನಿ ಹಾಲಿನ ಬ್ರಾಂಡ್‌ನ್ನು ಅಳವಡಿಸಿಕೊಳ್ಳದೇ ವಿವಿಧ ಖಾಸಗಿ ಸಂಸ್ಥೆಗಳು ಪುನ: ಅದೇ ಹಾಲನ್ನು ಬೇರೆ ಬ್ರಾಂಡ್‌ಗಳನ್ನು ನಮೂದಿಸಿ, ದರ ನಿಗಧಿಪಡಿಸಿ, ಕರ್ನಾಟಕ್ಕೆ ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಖಾಸಗಿ ಸಂಸ್ಥೆಗಳ ವಿವರಗಳನ್ನೊಳಗೊಂಡ ಸಂಪೂರ್ಣ ಮಾಹಿತಿ ಒದಗಿಸುವುದು;	ಒಕ್ಕೂಟದಿಂದ ತಮಿಳುನಾಡಿಗೆ ನಂದಿನಿ ಬ್ರಾಂಡ್‌ನ ಹಾಲನ್ನು ತಮಿಳು ಭಾಷೆ ಮತ್ತು ತೆಲುಗು ಭಾಷೆ ಆರ್ಟ್ ವರ್ಕ್‌ನಲ್ಲಿ ಬೆಂಗಳೂರು ಹಾಲು ಒಕ್ಕೂಟದಲ್ಲಿಯೇ ಪ್ಯಾಕ್ ಮಾಡಿ ರವಾನಿಸುತ್ತಿರುವ ಕಾರಣ ನಂದಿನಿ ಹಾಲನ್ನು ಬೇರೆ ಬ್ರಾಂಡ್ ಅಳವಡಿಸಿಕೊಂಡು ಮಾರಾಟ ಮಾಡಲು ಅವಕಾಶಗಳು ಇರುವುದಿಲ್ಲ.
ಉ)	ಬೆಂಗಳೂರು ಹಾಲು ಉತ್ಪಾದಕರ ಸಹಕಾರ ಸಂಘದಿಂದ ತಮಿಳುನಾಡಿಗೆ ಸರಬರಾಜು ಆಗುತ್ತಿರುವ ಹಾಲಿಗೆ ನಿಗಧಿಪಡಿಸಿರುವ ದರ ಎಷ್ಟು; ಪ್ರತಿ ನಿತ್ಯ ಬರುವ ಆದಾಯ ಎಷ್ಟು ಹಾಗೂ ತಮಿಳುನಾಡಿನಿಂದ ರಾಜ್ಯಕ್ಕೆ ಸರಬರಾಜು ಆಗುವ ಹಾಲಿನಿಂದಾಗಿ ಬೆಂಗಳೂರು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಉಂಟಾಗುತ್ತಿರುವ ನಷ್ಟದ ಪ್ರಮಾಣ ಎಷ್ಟು; ಇದಕ್ಕೆ ಕಾರಣಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಪ್ರಸ್ತುತ ಒಕ್ಕೂಟದಿಂದ ತಮಿಳುನಾಡಿಗೆ ಮಾರಾಟ ಮಾಡುತ್ತಿರುವ ದರಗಳು ಈ ಕೆಳಕಂಡಂತಿವೆ. (ಕೋಷ್ಟಕ ಕೆಳಗೆ) ಹೊರರಾಜ್ಯಕ್ಕೆ ಪರಿವರ್ತನೆಗೆ ಕಳುಹಿಸುತ್ತಿರುವ ಹಾಲಿಗೆ ಉಂಟಾಗುತ್ತಿರುವ ನಷ್ಟವನ್ನು ತಪ್ಪಿಸಲು ತಾತ್ಕಾಲಿಕವಾಗಿ ಮೂರು ತಿಂಗಳ ಅವಧಿಗೆ ತಮಿಳುನಾಡಿನಲ್ಲಿ ಮಾರಾಟ ಮಾಡಲಾಗುತ್ತಿದ್ದು ಒಕ್ಕೂಟಕ್ಕೆ ಯಾವುದೇ ನಷ್ಟವಾಗುತ್ತಿರುವುದಿಲ್ಲ.
ಊ)	ತಮಿಳುನಾಡಿನಿಂದ ಖಾಸಗಿ ಸಂಸ್ಥೆಗಳು ರಾಜ್ಯಕ್ಕೆ ಸರಬರಾಜು ಮಾಡುತ್ತಿರುವ ಹಾಲನ್ನು ತಡೆಗಟ್ಟುವ ಉದ್ದೇಶ ಸರ್ಕಾರಕ್ಕೆ ಇದೆಯೆ?	ಪ್ರಸ್ತುತ ಹೊರರಾಜ್ಯದ ಖಾಸಗಿ ಡೇರಿ ಸಂಸ್ಥೆಗಳು ಗ್ರಾಹಕರಿಗೆ ಹೆಚ್ಚಿನ ರಿಯಾಯಿತಿ ಆಮಿಷ ಒಡ್ಡಿ ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿರುವುದರಿಂದ ಹಾಗೂ ಕೋವಿಡ್-19 ಹಿನ್ನಲೆಯಲ್ಲಿ ನಂದಿನಿ ಹಾಲಿನ ಮಾರುಕಟ್ಟೆ ಕಡಿಮೆಯಾಗಿರುತ್ತದೆ. ಆದ್ದರಿಂದ ನಂದಿನಿ ಹಾಲು ಮಾರಾಟ ಹೆಚ್ಚಿಸಲು ಗ್ರಾಹಕರ ಅರಿವು ಕಾರ್ಯಕ್ರಮಗಳನ್ನು ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕ್ರಸಂ	ಹಾಲು ಮತ್ತು ಹಾಲಿನ ಉತ್ಪನ್ನ	ಪರಿಮಾಣ	ಪ್ರತಿ ಕೆ.ಜಿ/ಲೀಗೆ ಬಿಲ್ಲಿಂಗ್ ದರ (Ex Dairy)
1	Nandini Special Toned Milk	250 ml	32.00
2		500 ml	32.00
3		1000ml	32.00
4		6000ml	32.00
5	Nandini Standardised Milk	500ml	34.00
6		1000ml	34.00
7		6000ml	34.00
8	Nandini Full Cream Milk	200ml	38.00
9		500ml	37.00
10		1000ml	37.00
11	Nandini Curd	200Gms	35.50
12		500 Gms	35.50
13		1000Gms	35.50

ಪಸಂಮೀ ಇ-258 ಸಲೆವಿ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಪಸಂಮೀ 273 ಸಲೆವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:03.11.2020

<u>ಇವರಿಂದ:</u>

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

<u>ಇವರಿಗೆ:</u>

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ **ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 674 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ **ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 674 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

Received
03/11/2020